ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ದೇವನಹಳ್ಳಿ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು
**ಕೆ.ಆರ್. ನರಸಿಂಹನ್**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**DEVANAHALLI:** An Introduction Book on Places in Karnataka that Played a Major Role in the Freedom Struggle, Written by K.R. Narsimhan, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಕೆ.ಆರ್. ನರಸಿಂಹನ್

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೪೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001

ಸ್ವಾತಂತ್ರ್ಯದ ಅಮೃತಮಹೋತ್ಸವ



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

**'ಎಂದುರೋ ಮಹಾನುಭಾವುಲು ಅಂದರಿಕೀ ನಾ ವಂದನಮುಲು'** – ಎಂಬ ತ್ಯಾಗರಾಜ ಸ್ವಾಮಿಗಳ ಕೀರ್ತನೆಯ ಮೊದಲ ಚರಣದಂತೆ, ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ತನು–ಮನಗಳನ್ನರ್ಪಿಸಿದ ಅದೆಷ್ಟೋ ಮಂದಿ ಭಾರತ ಮಾತೆಯ ಸುಪುತ್ರರಿಗೆ ನನ್ನ ನಮನಗಳು. ಸ್ವಾತಂತ್ರ್ಯ ಚಳುವಳಿಯ ನೇತಾರರಾಗಿದ್ದ ಧೀರ–ವೀರ ಪುರುಷರಲ್ಲಿ ಕೆಲವರ ಚಿತ್ರಣವನ್ನು ಮಾತ್ರ ಇಲ್ಲಿ ತಮ್ಮ ಮುಂದಿಡಲು ಪ್ರಯತ್ನಿಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗುಡಿಬಂಡೆ, ಶಿಡ್ಲಘಟ್ಟ ತಾಲ್ಲೂಕುಗಳಿಗೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬರುವ ದೇವನಹಳ್ಳಿ ತಾಲ್ಲೂಕಿನ ಕೆಲವು ವ್ಯಕ್ತಿಗಳು ಮಾತ್ರ ಇಲ್ಲಿ ಕಂಡಿದ್ದಾರೆ. ಇಂತಹ ಇನ್ನೂ ಎಷ್ಟೋ ಜನರ ವಿಚಾರಗಳು ಸಹ ನಮಗೆ ಮುಖ್ಯವಾಗಿವೆ. ಇದನ್ನರಿಯಬೇಕಾದಲ್ಲಿ ಇನ್ನೊಂದಷ್ಟು ಹೆಚ್ಚಿನ ಸಮಯ ಮತ್ತು ಕ್ಷೇತ್ರಕಾರ್ಯಗಳು ಅಗತ್ಯವೆಂದು ನನ್ನ ಅಭಿಮತವಾಗಿದೆ.

ಇಲ್ಲಿನ ಸ್ವಾತಂತ್ರ್ಯಯೋಧರ ಬಗೆಗಿನ ನನ್ನ ಬರಹವೇ ಅಂತಿಮ ವೆಂದೇನಲ್ಲ. ಇದು ಅವರ ಬಗೆಗಿನ ಪರಿಚಯಾತ್ಮಕವಾದ ಸಂಗತಿಗಳಾಗಿದ್ದು ಲಭ್ಯವಿರುವ ಮಾಹಿತಿಗಳಿಂದ ಬರೆದಿರುವುದು. ಇನ್ನೂ ವಿವರವಾದ ಕೃತಿಗಳು ಇವರ ಬಗೆಗೆ ಹೊರಬರಲೆಂದು ಆಶಿಸುತ್ತೇನೆ.

ನನಗೆ ಇಂತಹ ಕಿರುಹೊತ್ತಿಗೆಯನ್ನು ಸಿದ್ಧಪಡಿಸಲು ಅವಕಾಶ ಮಾಡಿಕೊಟ್ಟ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಿಗೆ ಮತ್ತು ಸಮಿತಿಯ ಸದಸ್ಯರೆಲ್ಲರಿಗೂ ನನ್ನ ಗೌರವಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಸಂಪಾದಕರಾದ ಶ್ರೀ ನರೇಂದ್ರಕುಮಾರ್ ಅವರಿಗೆ ವಿಶೇಷವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕೃತಿ ರಚನೆಗೆ ಆತ್ಮೀಯರಾದ ಕೆಲವು ಮಿತ್ರರು ಮತ್ತು ಅವರ ಬರವಣಿಗೆಗಳು ಸಹಾಯಕವಾಗಿವೆ. ವೇಮಗಲ್ ಸೋಮಶೇಖರ್, ಚಿಕ್ಕಬಳ್ಳಾಪುರದ ಗೋಪಾಲಗೌಡ ಕಲ್ವಮಂಜಲಿ, ಶಿಡ್ಲಘಟ್ಟದ ಪತ್ರಕರ್ತ ಮಿತ್ರ ಮಲ್ಲಿಕಾರ್ಜುನ್, ಗುಡಿಬಂಡೆಯ ಪತ್ರಕರ್ತ ಜಿ.ಎಸ್. ನಾಗೇಂದ್ರ, ಬಾಗೇಪಲ್ಲಿಯ ಕೃಷ್ಣ, ದೇವನಹಳ್ಳಿಯ ಗುರುಸಿದ್ದಯ್ಯ ಬಿಟ್ಟಿಸಂದ್ರ ಇವರೆಲ್ಲರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಸಹೃದಯರು ಈ ಪುಟ್ಟ ಕೃತಿಯನ್ನು ನಿರ್ಮಲ ಮನಸ್ಸಿನಿಂದ ಪರಾಮರ್ಶಿಸಿ ಸಲಹೆ ಸೂಚನೆಗಳನ್ನು ನೀಡಬೇಕಾಗಿ ವಿನಂತಿಸುತ್ತೇನೆ.

**– ಕೆ.ಆರ್. ನರಸಿಂಹನ್**
ಯಲಹಂಕ

## ಪರಿವಿಡಿ


ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧

ದೇವನಹಳ್ಳಿ

**(ದೇವನಹಳ್ಳಿ, ಚಿಕ್ಕಬಳ್ಳಾಪುರ, ಗುಡಿಬಂಡೆ, ಬಾಗೇಪಲ್ಲಿ, ಶಿಡ್ಲಘಟ್ಟ ತಾಲ್ಲೂಕುಗಳಿಗೆ ಅನ್ವಯ)**

ಪೀಠಿಕೆ ೧೫
ಮಹಾತ್ಮ ಗಾಂಧೀಜಿ ಅವರ ಪ್ರವಾಸ ೧೮
ದೇವನಹಳ್ಳಿ ತಾಲ್ಲೂಕಿನ ಸ್ವಾತಂತ್ರ್ಯ ಯೋಧರು ೨೨
ಚಿಕ್ಕಬಳ್ಳಾಪುರ ತಾಲ್ಲೂಕು: ಸ್ವಾತಂತ್ರ್ಯ ಯೋಧರು ೨೭
ಶಿಡ್ಲಘಟ್ಟ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರು ೪೭
ಉಪಸಂಹಾರ ೫೧
ಗ್ರಂಥ ನೆರವು ೫೨
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೫೩

# ಪೀಠಿಕೆ

ಭಾರತ ದೇಶವು ಪ್ರಾಚೀನವಾದ ಭವ್ಯ ಪರಂಪರೆಯನ್ನು, ಸನಾತನವಾದ ಸಂಸ್ಕೃತಿಯನ್ನು ಹೊಂದಿ ಇಂದು ಜಗತ್ತಿನಲ್ಲಿ ಶ್ರೇಷ್ಠವಾದ ಸ್ಥಾನವನ್ನಲಂಕರಿಸಿದೆ. ಮನುಕುಲಕ್ಕೆ ಮಾರ್ಗದರ್ಶನವನ್ನು ನೀಡುತ್ತಿರುವ ವೇದ, ಉಪನಿಷತ್ತು, ದರ್ಶನ, ಮೀಮಾಂಸೆಗಳು ಭಾರತ ದೇಶದ ಸಾರ್ವಕಾಲಿಕ ಸಂಪತ್ತಾಗಿವೆ. ರಾಮಾಯಣ, ಮಹಾಭಾರತದಂತಹ ಮೇರುಸದೃಶ ಕಾವ್ಯಗಳು ಹುಟ್ಟಿದ ದೇಶ ಭಾರತ. ಭಗವದ್ಗೀತೆಯಂತಹ ಅದ್ಭುತ ಗ್ರಂಥವು ಇಂದು ಜಗತ್ತಿಗೆ ಬೆಳಕಾಗಿದೆಯೆಂದರೆ ಅದಕ್ಕೆ ಕಾರಣ ಭಾರತ ದೇಶವೆಂದೇ ಹೇಳಬೇಕು. ಗೌತಮ ಬುದ್ಧ, ಮಹಾವೀರರಂತಹ ಮಹಾನ್ ವ್ಯಕ್ತಿಗಳು ಸಾರಿದ ಅಹಿಂಸಾ ವ್ರತವು ಭಾರತ ದೇಶದಿಂದ ಇಡೀ ಜಗತ್ತಿಗೇ ಪ್ರಸರಿಸಿರುವುದಾಗಿದೆ. ಇಂತಹ ಭಾರತ ದೇಶವು ಪರಕೀಯರ ಆಕ್ರಮಣಕ್ಕೆ, ಅವರ ತುಳಿತಕ್ಕೆ, ದಾಸ್ಯದ ಸಂಕೋಲೆಗೆ ತುತ್ತಾದದ್ದು ದುರ್ದೈವವೆಂದೇ ಹೇಳಬಹುದು. ಆದರೆ ಭಾರತ ಮಾತೆಯ ಧೀರ ಪುರುಷ–ಮಹಿಳೆಯರು ಕೆಚ್ಚೆದೆಯಿಂದ ಹೋರಾಡಿ ಭಾರತ ಮಾತೆಗೆ ಸ್ವಾತಂತ್ರ್ಯವನ್ನು ತಂದುಕೊಟ್ಟದ್ದೊಂದು ರೋಚಕ ಇತಿಹಾಸವೇ ಆಗಿದೆ.

ಭಾರತ ದೇಶಕ್ಕೆ ಪರಕೀಯರು ಬಂದದ್ದು ವ್ಯಾಪಾರದ ನೆವದಿಂದಲಾದರೂ, ಅವರು ಇಲ್ಲಿಯೇ ನೆಲೆಯೂರುವಂತಾದದ್ದು ದುರದೃಷ್ಟದ ಸಂಗತಿ. ಡಚ್ಚರು, ಪೋರ್ಚುಗೀಸರು, ಬ್ರಿಟಿಷರು ನಮ್ಮ ದೇಶಕ್ಕೆ ಕಾಲಿಟ್ಟ ಪರದೇಶದವರಾದರೂ, ಇವರಲ್ಲಿ ಬ್ರಿಟಿಷರೇ ಅಗ್ರಗಣ್ಯ ಸ್ಥಾನದಲ್ಲಿ ನಿಲ್ಲುತ್ತಾರೆ. ಭಾರತ ದೇಶದ ಸಂಪತ್ತನ್ನು ದೋಚಿಕೊಂಡು, ಬಾಚಿಕೊಂಡು ತಮ್ಮ ದೇಶಕ್ಕೆ ತೆಗೆದುಕೊಂಡು ಹೋದ ಆಂಗ್ಲರು ದೀರ್ಘಕಾಲ ಇಲ್ಲಿ ನೆಲೆಸಿದವರಾಗಿದ್ದಾರೆ. ಭಾರತವು ಇವರಿಂದಾಗಿ ಆರ್ಥಿಕ ದೌರ್ಬಲ್ಯಕ್ಕೆ ಒಳಗಾದಂತೆ ಭವ್ಯ ಸಂಸ್ಕೃತಿಯು ಕುಗ್ಗುವುದಕ್ಕೆ ಕಾರಣವಾಗುತ್ತದೆ. ಸೂರ್ಯ ಮುಳುಗದ ದೇಶದ ಜನರು ಭಾರತದಲ್ಲಿ ತಮ್ಮ ಪ್ರತಾಪಸೂರ್ಯನನ್ನು ಬೆಳಗುತ್ತಾರೆ.

ಭಾರತ ದೇಶದ ಅಧ್ಯಾತ್ಮವು ಭದ್ರವಾದ ನೆಲೆಗಟ್ಟಿನಿಂದ ಕೂಡಿದ್ದಾಗಿದೆ. ಇದು ಸ್ವಾಭಿಮಾನದ ದೇಶವಾಗಿದೆ. ಇಲ್ಲಿನವರ ಅತ್ಯುಗ್ರಅಭಿಮಾನ, ವಿವೇಕಚಿತ್ತಗಳಿಂದಾಗಿ ಬ್ರಿಟಿಷರಿಗೆ ಇಲ್ಲಿನ ದೇಶವಾಸಿಗಳನ್ನು ಸುದೀರ್ಘಕಾಲ ದಾಸ್ಯದಲ್ಲಿಡಲು ಸಾಧ್ಯವಾಗದೆ ಹೋಯಿತು. 'ಹೊನ್ನಾದರೇನು, ಕಬ್ಬಿಣವಾದರೇನು ಮಿಣಿ ಎಂದಿಗೂ ಬಂಧನವೇ' ಎಂಬ ಕವಿವಾಣಿಯಂತೆ ಭಾರತದ ಪ್ರಜೆಗಳ ಮನಸ್ಸಿನಲ್ಲಿ ತಮ್ಮ ದೇಶವನ್ನು ಸಂಕೋಲೆಯಿಂದ ವಿಮುಕ್ತಗೊಳಿಸಬೇಕೆಂಬ ಭಾವನೆ ಅಂಕುರವಾಯಿತು. ಇದರಿಂದಾಗಿ ಆದಿವಾಸಿಗಳು, ಸಂಸ್ಥಾನದ ಅರಸರು, ಕ್ರಾಂತಿಕಾರಿಗಳು, ರೈತರು, ಯುವಕರು, ವಿದ್ಯಾರ್ಥಿಗಳು, ಸರಕಾರಿ ನೌಕರರೆಲ್ಲರೂ ಬ್ರಿಟಿಷರ ವಿರುದ್ಧವಾಗಿ ತಲೆಯೆತ್ತಿ ನಿಂತರು. ಮೈಸೂರು ಹುಲಿಯೆಂದು ಕರೆಸಿಕೊಂಡ ಟಿಪ್ಪು ಸುಲ್ತಾನನ ಬ್ರಿಟಿಷರ ವಿರುದ್ಧದ ಅಕ್ರಮಣವೂ ಸಹ ಇದಕ್ಕೊಂದು ಪ್ರಮುಖವಾದ ಪೋಷಣೆಯಾಗಿ ಒದಗಿತು. ಇದರೊಂದಿಗೆ ನಮ್ಮ ಪ್ರಜೆಗಳಲ್ಲಿ ಅಡಕವಾಗಿದ್ದ 'ಸ್ವಧರ್ಮ', 'ಸ್ವರಾಜ್ಯ'ವೆಂಬ ಮಂತ್ರಗಳ ಶಕ್ತಿಯೂ ಕಾರಣವಾಗಿ ಸ್ವಾತಂತ್ರ್ಯ ಸಂಗ್ರಾಮದ ಕೆಚ್ಚು ಪ್ರಜ್ವಲಿಸಿತೆನ್ನಬಹುದು. ಬ್ರಿಟಿಷರ ವಿರುದ್ಧ ಹೋರಾಡಿದ ಗಂಡೆದೆಯ ಧೀರಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ಟಿಪ್ಪುವಿನ ನಂತರದಲ್ಲಿ ಸುಮಾರು ಇಪ್ಪತ್ತೈದು ವರ್ಷಗಳ ಬಳಿಕ ಬ್ರಿಟಿಷರನ್ನು ಎದುರಿಸಿ ಹೋರಾಡಿದ ಧೀರಮಹಿಳೆಯ ಆದರ್ಶ ನಮ್ಮ ನಾಡಿನವರಿಗೊಂದು ಸ್ಫೂರ್ತಿಯಾಯಿತು.

ರಾಷ್ಟ್ರಮಟ್ಟದಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿಯಾದದ್ದು 'ಸಿಪಾಯಿ ದಂಗೆ'ಯೆಂಬ ೧೮೫೭ರ ಚಳವಳಿಯೇ ಆಗಿದೆ. ಇದೇ ಮೊದಲ ಆಯುಧಪೂಜೆಯೂ ಹೌದು. ಅನಂತರ ೧೮೫೮ರಲ್ಲಿ ಝಾನ್ಸಿರಾಣಿ ಲಕ್ಷ್ಮೀಬಾಯಿಯು ಬ್ರಿಟಿಷರ ವಿರುದ್ಧ ಆಕ್ರಮಣವೆಸಗಿ ವೀರಸ್ವರ್ಗವನ್ನೇರಿದ ಇತಿಹಾಸದ ಪ್ರಸಂಗವು ವೀರರಮಣಿಯರ ಸಾಹಸ–ಶಕ್ತಿ–ಶೌರ್ಯಗಳ ಮಹಾ ನಿದರ್ಶನವಾಗಿದೆ. ಅಗಾಧವಾದ ಶಕ್ತಿ–ಸಂಪನ್ನತೆಗಳು ಭಾರತದ ಒಡಲೊಳಗೆ ತುಂಬಿದೆಯೆಂಬುದಕ್ಕೆ ನಮಗಿಂದು ಇಂತಹ ಪುಣ್ಯನೆಲದಲ್ಲಿ ದೊರೆಯುತಿರುವ ವೀರರ ಯಶೋಗಾಥೆಗಳೇ ಸಾಕ್ಷಿಯಾಗಿವೆ. ಭಾರತವು 'ವೀರ ಭೋಜ್ಯಾವಸುಂಧರಾ'. ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ಅದೆಷ್ಟೋ ಮಂದಿಯಲ್ಲಿ ಭಗತ್‌ಸಿಂಗ್ ಒಬ್ಬ ಶ್ರೇಷ್ಠ ಪರಾಕ್ರಮಿಯಾಗಿದ್ದಾನೆ. ಈತನ ತಾಯಿ ವೀರಮಾತೆ ಹೇಳಿದ ಮಾತು, 'ನನ್ನ ಒಬ್ಬ ಮಗನೇನು, ಹತ್ತು ಮಕ್ಕಳಿದ್ದರೂ



ಅವರನ್ನೆಲ್ಲಾ ದೇಶದ ಸ್ವಾತಂತ್ರ್ಯಕ್ಕಾಗಿ ಬಲಿಕೊಡಲು ಸಿದ್ಧಳಿದ್ದೇನೆ'–ಇದು ನಮ್ಮ ರಾಷ್ಟ್ರದ ತುಂಬೆಲ್ಲಾ ತುಂಬಿಕೊಂಡಿರುವ ವೀರನಾರಿಯರ 'ದಿವ್ಯ ವಾಣಿ'ಗೆ ಪ್ರತೀಕವೆನ್ನಬಹುದು.

ಭಾರತ ದೇಶದ 'ಸ್ವಾತಂತ್ರ್ಯ ಹೋರಾಟ' ಒಂದು ದಿಕ್ಕಿನದಲ್ಲ, ಒಂದು ಗುಂಪಿನದಲ್ಲ, ಇದು ಮೂಲೆ ಮೂಲೆಗಳಿಂದ ಹರಿದುಬಂದ ತ್ಯಾಗ, ಶೌರ್ಯ, ಬಲಿದಾನಗಳ ಪ್ರವಾಹ. ಇದರ ಕಣ್ಣು ಸಹಸ್ರ, ತೋಳು ಸಹಸ್ರವೆಂದೇ ಹೇಳಬೇಕು. ನಮ್ಮ ದೇಶದ ಸ್ವಾತಂತ್ರ್ಯ ಗಳಿಕೆಯಲ್ಲಿ ಕ್ರಾಂತಿಕಾರಿಗಳ ಗುಂಪು ಇರುವಂತೆ, ದೇಶ ಚಿಂತಕರು, ಸಮಾಜಸುಧಾರಕರು ಇದ್ದಾರೆ. ನೇರವಾಗಿ ಚಳುವಳಿಗಳಲ್ಲಿ ಹೋರಾಟ ಮಾಡಿದವರದೊಂದು ಮುಖವಾದರೆ, ತೆರೆಯ ಹಿಂದೆ ನಿಂತು ಅಸೀಮ ಬಲವನ್ನೆರೆದವರಿದ್ದಾರೆ. ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಹಾಡು, ಹರಿಕಥೆ, ಲಾವಣಿಗಳು ಸಹ ಇಲ್ಲಿ ಲಾಳಿಯಾಡಿದೆ. ಸಂವಹನದ ಮಾಧ್ಯವಾಗಿ ಪತ್ರಿಕೆಗಳು, ನಾಟಕಗಳು ಇಲ್ಲಿ ವಿಜೃಂಭಿಸಿವೆ. ಬಲಾಢ್ಯರನ್ನು ಸದೃಢಗೊಳಿಸಿದ ವ್ಯಾಯಾಮ ಶಾಲೆಗಳು ಇಲ್ಲಿ ತಮ್ಮ ಪಾತ್ರ ನಿರ್ವಹಿಸಿವೆ. ಸೇವಾದಳದಂತಹ ಸಂಘಟನೆಗಳು ನಿರ್ವಹಿಸಿದ ಪಾತ್ರ ಕಡಿಮೆಯೇನಲ್ಲ. 'ತಮ್ಮ ಜೀವನದ ಏಕೈಕ ಗುರಿ ಸ್ವಾತಂತ್ರ್ಯ ಗಳಿಕೆಯೇ ಆಗಿದೆ' ಎಂಬ ಕೋಟಿ ಕೋಟಿ ಜನರ ದೃಢ ಸಂಕಲ್ಪದಿಂದಾಗಿ ಭಾರತವು ಸ್ವಾತಂತ್ರ್ಯದ ಹಕ್ಕನ್ನು ಪಡೆದುಕೊಳ್ಳಲು ಸಾಧ್ಯವಾಯಿತು.

❑

# ಮಹಾತ್ಮ ಗಾಂಧೀಜಿ ಅವರ ಪ್ರವಾಸ

ಮಹಾತ್ಮ ಗಾಂಧೀಜಿಯವರು ೧೯೧೫ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತ ದೇಶಕ್ಕೆ ಮರಳಿ ಬಂದ ನಂತರದಲ್ಲಿ ಇಲ್ಲಿನ ಸಂಗ್ರಾಮದ ಚಳುವಳಿ ಗರಿಗೆದರಿತೆನ್ನಬಹುದು. ಇದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಹೋನ್ನತವಾದ ಶಕ್ತಿ ದೊರಕಿದ ಕಾಲವೇ ಆಗಿದೆ. ಗಾಂಧೀಜಿಯವರು ಚಳುವಳಿಗೆ ಬಳಸಿಕೊಂಡ ಅಸ್ತ್ರಗಳೆಂದರೆ ಅಹಿಂಸೆ ಮತ್ತು ಸತ್ಯಾಗ್ರಹ. ಇವೆರಡು ಪ್ರಧಾನವಾದ ಮೌಲ್ಯಗಳು ಅವರ ಜೀವನವಿಡೀ ಹರಿದುಬಂದಿದ್ದನ್ನು ನಾವಿಂದು ಗುರುತಿಸಬಹುದಾಗಿದೆ. ಬಾಪೂಜಿ ಅವರ ಹರಿಜನೋದ್ಧಾರ, ಖಾದಿ ಪ್ರಚಾರಗಳೊಂದಿಗೆ, ಗ್ರಾಮೋದ್ಯೋಗ, ಮದ್ಯಪಾನ ನಿಷೇಧಗಳು ಸೇರಿಕೊಂಡು ಬಂದದ್ದಾಗಿದೆ. ಮಹಾತ್ಮರ ಮಾರ್ಗದರ್ಶನದಲ್ಲಿ ದೇಶಭಕ್ತರು ದೇಶದ ಸ್ವಾತಂತ್ರ್ಯಕ್ಕೆ ತಮ್ಮ ಪ್ರಾಣಗಳನ್ನೇ ಮುಡುಪಾಗಿಡಲು ಸಿದ್ಧರಾದರು. ಬ್ರಿಟಿಷರ ಕ್ರೌರ್ಯಗಳು ಮುಂದುವರಿದುಕೊಂಡೇ ಹೋಯಿತು. ಇಂತಹ ಸಂದರ್ಭದಲ್ಲಿಯೇ ಜಲಿಯನ್‌ವಾಲಾಬಾಗ್ ಭೀಕರ ಹತ್ಯಾಕಾಂಡ ನಡೆಯಿತು. ಇದರಿಂದ ಭಾರತೀಯರ ಕ್ರೋಧ ಜ್ವಾಲಾಮುಖಿಯಂತೆ ಸ್ಫೋಟಗೊಂಡಿತಾದರೂ ಇದು ತೀವ್ರಗೊಂಡಿದ್ದು ಇಪ್ಪತ್ತನೇ ಶತಮಾನದ ಮೂರನೇ ದಶಕದಲ್ಲಿಯೇ ಎಂದೆನ್ನಬಹುದು.

ಬಾಪು ಅವರು ಖಾದಿ ಪ್ರಚಾರ ಮತ್ತು ನಿಧಿ ಸಂಗ್ರಹಣೆಯಂತಹ ಮಹತ್ತರ ಕಾರ್ಯಕ್ಕಾಗಿ ಇಡೀ ಭಾರತವನ್ನು ಸುತ್ತಾಡಿದರು. ಇಂತಹದೊಂದು ಸಮಯದಲ್ಲಿ ೧೯೨೭ರಲ್ಲಿ ದಕ್ಷಿಣ ಭಾರತದ ಪ್ರಮುಖ ನಗರವಾದ ಮುಂಬೈ ಪ್ರವಾಸ, ನಂತರದ ಬೆಳಗಾವಿ ಪ್ರವಾಸಗಳು ಗಮನ ಸೆಳೆಯುವಂತಿವೆ. ಕೊಲ್ಹಾಪುರಕ್ಕೆ ಬರುವ ವೇಳೆಗೆ ಅವರ ಆರೋಗ್ಯವು ಹದಗೆಟ್ಟಿತು. ಬೆಳಗಾವಿ–



ಸಾಮಂತವಾಡಿ ನಡುವಿರುವ ಅಂಬೋಲಿ ಎಂಬ ಗಿರಿದುರ್ಗದಲ್ಲಿ ತಂಗಿದ್ದರಾದರೂ ಅವರ ಆರೋಗ್ಯ ಸುಧಾರಿಸಲಿಲ್ಲ. ಇದೇ ಸಂದರ್ಭದಲ್ಲಿ ಗಾಂಧೀಜಿಯವರಿಗೆ ಕೋಲಾರ ಜಿಲ್ಲೆಯ ನಂದಿಗಿರಿಧಾಮದ ಭೌಗೋಳಿಕ ಮತ್ತಿತರ ಸಂಗತಿಗಳನ್ನು ಮನವರಿಕೆ ಮಾಡಿಕೊಟ್ಟಾಗ ಇಲ್ಲಿ ಬಂದು ವಿಶ್ರಾಂತಿ ಪಡೆಯಲು ಸಮ್ಮತಿಸುತ್ತಾರೆ. ಇದರಿಂದಾಗಿ ಮಹಾತ್ಮ ಅವರ ನೇರವಾದ ಭೇಟಿ ಮತ್ತು ಅವರೊಂದಿಗೆ ಸಂಪರ್ಕ ಪಡೆಯಲು ಹಾಗೂ ಅವರಿಂದ ಸ್ಫೂರ್ತಿ ಪಡೆಯಲು ಬಹು ಸಂಖ್ಯೆಯ ಜನರಿಗೆ ಸಾಧ್ಯವಾಗುತ್ತದೆ. ಇಂತಹ ಸನ್ನಿವೇಶವೂ ಸಹ ಇಲ್ಲಿನ ಹಲವಾರು ಮಂದಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ನೇರವಾಗಿ ಭಾಗವಹಿಸಲು ಪ್ರೋತ್ಸಾಹ ನೀಡುತ್ತದೆ.

## ನಂದಿಗಿರಿಧಾಮದಲ್ಲಿ ಗಾಂಧೀಜಿ

ಮಹಾತ್ಮ ಗಾಂಧೀಜೀಯವರು ಬೆಂಗಳೂರಿಗೆ ಐದು ಸಲ ಭೇಟಿಕೊಟ್ಟಿರುತ್ತಾರೆ. ಇದರಲ್ಲಿ ಎರಡು ಸಲ ಅವರು ನಂದಿ ಗಿರಿಧಾಮದಲ್ಲಿ ವಿಶ್ರಮಿಸಿದ್ದು ಮಹತ್ವದ ವಿಚಾರವಾಗಿದೆ. ಗಾಂಧಿ ಅವರು ೧೯೨೭ರಲ್ಲಿ ನಂದಿಗಿರಿಧಾಮಕ್ಕೆ ಬಂದಿದ್ದಾಗ ಇಲ್ಲಿ ೪೫ ದಿನಗಳ ಕಾಲ ವಿಶ್ರಮಿಸಿಸಿರುತ್ತಾರೆ. ಕನ್ನಿಂಗ್‌ಹ್ಯಾಂ ಭವನವು ಇವರು ವಿಶ್ರಾಂತಿ ಪಡೆದ ಸ್ಥಳವಾಗಿದೆ. ನಂದಿ ಗಿರಿಧಾಮಕ್ಕೆ ಹತ್ತಿರವಿದ್ದ ಚಿಕ್ಕಬಳ್ಳಾಪುರ ಮತ್ತು ದೇವನಹಳ್ಳಿಯ ಸಾಮಾಜಿಕ ಜೀವನಕ್ಕೊಂದು ಚೈತನ್ಯವುಂಟಾಗುತ್ತದೆ. ಅನೇಕರು ಅನೇಕ ರೀತಿಯಲ್ಲಿ ಮಹಾತ್ಮರ ವಾಸ್ತವ್ಯಕ್ಕೆ ತಮ್ಮ ಅಳಿಲು ಸೇವೆ ಸಲ್ಲಿಸಿದ್ದಾರೆ. ಇದರಲ್ಲಿ ಕೆಲವೇ ಮಂದಿ ಅವರ ಸತ್ಯಾಗ್ರಹ ಚಳುವಳಿಗಳಲ್ಲಿ ಭಾಗವಹಿಸಿದವರಾಗಿ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದವರಾಗಿದ್ದಾರೆ.

ಗಾಂಧೀಜಿ ಅವರನ್ನು ವಿಶ್ರಾಂತಿಗಾಗಿ ಕೈಬೀಸಿ ಕರೆದ ನಂದಿ ಗಿರಿಧಾಮವು ಸನಿಹದ ಬೆಂಗಳೂರು, ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಹೊಸ ಚೈತನ್ಯವುಂಟಾಗಿ ಇವರ ಉಪಚಾರಕ್ಕಾಗಿ ಜನ ತುದಿಗಾಲಲ್ಲಿ ನಿಲ್ಲುತ್ತಾರೆ. ಚಿಕ್ಕಬಳ್ಳಾಪುರದಲ್ಲಿ ಸ್ವಾಗತ ಸಮಿತಿಯೇರ್ಪಡಿಸಿದ್ದ ಅವರ ಆರೈಕೆಯಲ್ಲಿ ಯಾವುದೇ ಸಣ್ಣ ಲೋಪವೂ ಆಗದಂತೆ ಎಚ್ಚರ ವಹಿಸಲಾಗುತ್ತದೆ. ಮಹಾತ್ಮ ಗಾಂಧಿಯವರ ಆಪ್ತಕಾರ್ಯದರ್ಶಿ ಮಹದೇವ ದೇಸಾಯಿ, ರಾಜಗೋಪಾಲಾಚಾರಿ, ಗಂಗಾಧರ ದೇಶಪಾಂಡೆ ಇವರಂತಹ ಮುತ್ಸದ್ದಿಗಳು ಅವರ ಆರೈಕೆಯ

ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಇವರೆಲ್ಲರ ಸಂಪರ್ಕವೂ ಸಹಾ ಚಿಕ್ಕಬಳ್ಳಾಪುರ, ದೇವನಹಳ್ಳಿ ಜನತೆಗೆ ದೊರೆತಂತಾಗುತ್ತದೆ.

ಇದಕ್ಕೂ ಮುನ್ನವೇ ಸಂಸ್ಥಾನದ ಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಹಾತ್ಮರಿಗೆ ಮೈಸೂರಿಗೆ ಬರಲು ಆಹ್ವಾನವನ್ನು ನೀಡಿರುತ್ತಾರೆ. ಆದರೆ ನಡುವೆಯಲ್ಲಿಯೇ ಗಾಂಧೀಜಿಯವರು ಅನಾರೋಗ್ಯಕ್ಕೊಳಗಾದದ್ದು ಖೇದದ ಸಂಗತಿಯಾಗಿರುತ್ತದೆ. ರಾಜರ ಆಣತಿಯಂತೆ ದಿವಾನರಾಗಿದ ಮಿರ್ಜಾ ಇಸ್ಮಾಯಿಲ್ ಅವರ ಸೂಚನೆಗನುಸಾರವಾಗಿ ಎಲ್ಲವೂ ಸುಸೂತ್ರವಾಗಿ ನೆರವೇರಿದಂತಾಗಿ ಅವರಿಗೆ ಮುಂಚಿತವಾಗಿಯೇ ಮಹಾತ್ಮ ಗಾಂಧೀಜಿಯವರು ಎಂದಿನಂತೆ ತಮ್ಮ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಗೆ ಸನ್ನದ್ಧರಾಗುತ್ತಾರೆ. ಮಹಾತ್ಮರ ಪರಿವಾರ ೧೯೨೭ರ ಜೂನ್ ೫ರಂದು ಬೆಟ್ಟದಿಂದಿಳಿದು ಚಿಕ್ಕಬಳ್ಳಾಪುರ ತಲುಪುತ್ತಾರೆ. ಚಿಕ್ಕಬಳ್ಳಾಪುರ ಜನತೆ ಗಾಂಧೀಜಿಯವರಿಗೆ ಬಿನ್ನವತ್ತಳೆ ಮತ್ತು ನಿಧಿಯನ್ನು ಸಮರ್ಪಿಸುತ್ತಾರೆ. ಇದಕ್ಕೆ ಪ್ರತಿಯಾಗಿ ಮಹಾತ್ಮರು ನಂದಿ ಗಿರಿಧಾಮದಲ್ಲಿ ತಾವಿರುವಷ್ಟು ಕಾಲವೂ ಚಿಕ್ಕಬಳ್ಳಾಪುರ ಜನತೆ ತನ್ನನ್ನು ಆರೈಕೆ ಮಾಡಿದ ರೀತಿ ನೀತಿಗಳಿಗೆ ಅವರನ್ನು ಅಭಿನಂದಿಸುತ್ತಾರೆ. ಬಡವರ ಪರವಾದ ಸಂದೇಶ ಮತ್ತು ಚರಕದ ಮಹಿಮೆಗಳನ್ನು, ಖಾದಿಪ್ರಚಾರದ ಮಹತ್ವವನ್ನು ಅಲ್ಲಿನ ಜನತೆಗೆ ತಿಳಿಸಿ ಬೆಂಗಳೂರಿಗೆ ಪ್ರಯಾಣ ಮಾಡುತ್ತಾರೆ.

ಸ್ವಾತಂತ್ರ್ಯ ಚಳುವಳಿಯ ಮುಖ್ಯವಾಹಿನಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದ ಚಟುವಟಿಕೆ ವ್ಯಾಯಾಮ ಶಾಲೆಗಳ ಸ್ಥಾಪನೆ. ವ್ಯಾಯಾಮ ಶಾಲೆಗಳಲ್ಲಿ ನಡೆಯುತ್ತಿದ್ದ ಅಂಗಸಾಧನೆ, ಅಲ್ಲಿನ ಆಟಗಳಲ್ಲದೆರ ಜೊತೆಗೆ ವಿವಿಧ ಶಾರೀರಿಕ ಕವಾಯಿತುಗಳೂ ನಡೆಯುತ್ತಿದ್ದವು. ಇದು ಅನೇಕ ತರುಣರನ್ನು ಆಕರ್ಷಿಸಿತ್ತು. ಇದರಿಂದಾಗಿ ದೇಶಕ್ಕೆ ನೂತನವಾದ ದೃಢಕಾಯರಾದ ತರುಣ ಸೈನಿಕರನ್ನು ವ್ಯಾಯಾಮಶಾಲೆಗಳು ಪೂರೈಸುವ ಕೇಂದ್ರಗಳಾದವು. ಇವು ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದುಕೊಡುವ ಕಾಯಕಲ್ಪಕ್ಕೆ ಉಪಾಂಗವಾಗಿ ತಮ್ಮ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದ್ದನ್ನು ಇಂದಿಗೂ ಉಳಿದುಕೊಂಡಿರುವುದು ಅನೇಕಾನೇಕ ವ್ಯಾಯಾಮಶಾಲೆಗಳ ಇತಿಹಾಸದಿಂದ ತಿಳಿದುಬರುವಂತಿದೆ.

ದೇವನಹಳ್ಳಿಯಲ್ಲಿ ಸಹ ಪ್ರಸಿದ್ಧವಾದ ವ್ಯಾಯಾಮಶಾಲೆಯಿದ್ದು ಇದು ಸುಮಾರು ಒಂದು ನೂರು ವರ್ಷಗಳಷ್ಟು ಪ್ರಾಚೀನತೆ ಹೊಂದಿದೆ ಎಂಬ ವಿಚಾರವು ತಿಳಿದುಬರುತ್ತದೆ. ಇಲ್ಲಿನ ವ್ಯಾಯಾಮಶಾಲೆಯ ಪೈಲ್ವಾನ್ ಎಸ್.ರಾಮಣ್ಣನವರು ಸೀಮೆಗೇ ಪ್ರಖ್ಯಾತರಾದವರು. ಸುಮಾರು ಒಂದುನೂರು ವರ್ಷಗಳ ಹಿಂದೆ ಜನಿಸಿದ್ದ ಇವರು ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ದೃಢಕಾಯರಾದ ತರುಣರಾಗಿದ್ದರು. ಇವರದ್ದು ತೀರಾ ಸಾಮಾನ್ಯವಾದ ಕುಟುಂಬವಾಗಿತ್ತಷ್ಟೇ ಅಲ್ಲದೆ ಬಡತನದಿಂದ ಕೂಡಿತ್ತು. ಶಂಕರಪ್ಪ ಮತ್ತು ಮುನಿಯಮ್ಮ ದಂಪತಿಗಳ ಮಗನಾದ ಪೈಲ್ವಾನ್ ರಾಮಣ್ಣನವರು ಬಾಲ್ಯದಲ್ಲಿ ದನಗಾಹಿಯಾಗಿದ್ದರೂ ನಂತರದ ದಿನಗಳಲ್ಲಿ ಕುಸ್ತಿಪಟುವಿಗೆ ಅಗತ್ಯವಾದ ದೇಹದಾರ್ಢ್ಯವನ್ನು ರೂಪಿಸಿಕೊಂಡರು. ಇವರು ತಮ್ಮ ಹತ್ತೊಂಬತ್ತನೇ ವಯಸ್ಸಿನಿಂದಲೇ ಕುಸ್ತಿಯಾಡುವುದನ್ನು ರೂಢಿಸಿಕೊಂಡರು. ಹದಿನೈದಕ್ಕೂ ಹೆಚ್ಚು ಹೆಸರುವಾಸಿಯಾದ ಕುಸ್ತಿಗಳಲ್ಲಿ ಭಾಗವಹಿಸಿದ್ದರು. ಪೈಲ್ವಾನ್ ರಾಮಣ್ಣನವರು ಪೈಲ್ವಾನ್ ಅಣ್ಣಯ್ಯಪ್ಪನ ಗರಡಿಯಲ್ಲಿ ಪಳಗಿದ್ದ ಸೀನಪ್ಪ ಮತ್ತು ಚಿಂತೆ ಕೃಷ್ಣಪ್ಪನ ವಿರುದ್ಧ ಸೆಣಸಿದ ಕುಸ್ತಿಗಳು ತುಂಬಾ ಜನಪ್ರಿಯವಾದದ್ದೆಂದು ತಿಳಿದುಬರುತ್ತದೆ. ಪೈಲ್ವಾನ್ ರಾಮಣ್ಣನವರು ತಮಿಳುನಾಡಿನ ಮಧುರೆ, ತಿರುಚ್ಚಿ, ಕೇರಳದ ತಿರುವನಂತಪುರಗಳಲ್ಲಿ ಸಹ ಕುಸ್ತಿಯಲ್ಲಿ ಭಾಗವಹಿಸಿರುತ್ತಾರೆ.

ದೇವನಹಳ್ಳಿಯು ಹೈದರ್ ಮತ್ತು ಟಿಪ್ಪು ಅವರ ಕಾಲದಿಂದಲೂ ಐತಿಹಾಸಿಕ ಮಹತ್ವವನ್ನು ಗಳಿಸಿದ ಸ್ಥಳವಾಗಿದೆ. ಇಲ್ಲಿರುವ ಪ್ರಾಚೀನವಾದ ಕೋಟೆ ಮತ್ತು ಇದಕ್ಕೆ ಸಂಬಂಧಿಸಿದ ಹತ್ತು ಹಲವು ಸಂಗತಿಗಳು ನಮಗೆ ಇಲ್ಲಿನ ಸಾಮಾಜಿಕ ಜೀವನಚಿತ್ರಣವನ್ನು ಕಟ್ಟಿಕೊಡುವ ಮೂಕಸಾಕ್ಷಿಯಾಗಿದೆ. ಇಂತಹ ಪರಂಪರೆ ಇರುವ ಕಡೆ ಕುಸ್ತಿಯಾಡುವ ಕಲೆಯೂ ಸಹಾ ಒಂದು ಶತಮಾನಗಳ ಹಿಂದಿನಿಂದಲೇ ರೂಢಿಯಲ್ಲಿದ್ದು ಇದು ಯಾವುದೇ ರೀತಿಯಲ್ಲಿ ಸ್ವಾತಂತ್ರ್ಯ ಚಳುವಳಿಗೆ ನೆರವಾಗಿದ್ದಿರಬೇಕೆಂದು ಯೋಚಿಸುವುದರಲ್ಲಿ ತಪ್ಪೇನಿಲ್ಲ. ಅದರ ಸಾಕ್ಷಿಯಾಗಿ ಇಲ್ಲಿ ಪೈಲ್ವಾನ್ ರಾಮಯ್ಯನವರ ಬದುಕು ಸಾಮಾಜಿಕ ಜೀವನದಲ್ಲಿ ಬೆರೆತುಹೋಗಿರುವುದು ಕಂಡುಬಂದಿದೆ.

❑

# ದೇವನಹಳ್ಳಿ ತಾಲ್ಲೂಕಿನ ಸ್ವಾತಂತ್ರ್ಯ ಯೋಧರು

ಆವತಿಯನ್ನು ಇತಿಹಾಸದ ತೊಟ್ಟಿಲು ಎಂದು ಕರೆಯಬಹುದಾಗಿರುತ್ತದೆ. ಇದರ ಪ್ರಸ್ತಾಪವು ನಮಗೆ ಹನ್ನೆರಡನೇ ಶತಮಾನದ ತಮಿಳು ಶಾಸನದಲ್ಲಿ ಇರುವುದಾಗಿದ್ದು, ಇದನ್ನೀಗ ಆವತಿಯ ಜಮೀನಿನಲ್ಲಿ ಕಾಣಬಹುದು. ಇದರಲ್ಲಿ 'ಆವತ್ತಿಯೂರು' ಎಂದಿದ್ದು ಇದು ನಂತರದ ಕಾಲದಲ್ಲಿ 'ಆವತಿ'ಯೆಂದಾಗಿದೆ. ಇತಿಹಾಸದ ಅಧ್ಯಯನದಲ್ಲಿ ಹಿರಿಯ ಕೆಂಪೇಗೌಡರಿಗೆ ಆದ್ಯ ಸ್ಥಾನವಿರುವುದನ್ನು ನಾವು ಗಮನಿಸುತ್ತಿದ್ದು, ಇವರನ್ನು ಆವತಿಯ ವಂಶಜರೆಂದೇ ಪರಿಗಣಿಸುತ್ತಿದ್ದೇವೆ.

ದೇವನಹಳ್ಳಿ ತಾಲ್ಲೂಕಿನ ಪ್ರಮುಖ ಸ್ಥಳವಾಗಿರುವ ಆವತಿಯು ಬೆಂಗಳೂರಿಗೆ ಸುಮಾರು ಮೂವತ್ತೊಂಬತ್ತು ಕಿ.ಮೀ. ದೂರದಲ್ಲಿದೆ. ಹೈದರಾಬಾದ್‌ನ ಹೆದ್ದಾರಿಯಲ್ಲಿ ಇರುವ ಆವತಿಗೆ ಹಲವು ಕಾರಣಗಳಿಂದ ಪ್ರಾಶಸ್ತ್ಯ ದೊರೆತಿದೆ. ಇದು ಬೆಟ್ಟಗಾಡಿನ ಪ್ರದೇಶವಾಗಿದ್ದು ಸಹಜವಾಗಿಯೇ ಸಾಹಸಿಗರಿಗೆ ಆಶ್ರಯದ ತಾಣವಾಗಿ ಕಾಣುತ್ತದೆ. ಪೂರ್ವದ ಯಣಮಂಜಿ ಪುತ್ತೂರು ಎಂಬ ಸ್ಥಳದಿಂದ ರಣಬೈರೇಗೌಡ ಮತ್ತು ಆತನ ಸಹೋದರರು ಪಶ್ಚಿಮದ ಕಡೆಗೆ ಭೋರ್ಗರೆದು ಹರಿಯುತ್ತಿದ್ದ ನದಿಯ ಪ್ರವಾಹವನ್ನು ದಾಟಿ ಬರುತ್ತಾರೆ. ತಮ್ಮ ಕುಲದ ಹೆಣ್ಣುಮಗಳಾಗಿದ್ದ ದೊಡ್ಡಮ್ಮನ ರಕ್ಷಣೆಯೇ ಇದಕ್ಕೆ ಕಾರಣವಾಗಿರುತ್ತದೆ. ತಾವು ನೆಲೆಸಿದ್ದ ಯಣಮಂಜಿ ಪುತ್ತೂರಿನ ಪಾಳೇಗಾರನ ಕಿರುಕುಳದಿಂದ ತಮ್ಮ ಕುಲದ ಹೆಣ್ಣುಮಗಳನ್ನು ರಕ್ಷಿಸಬೇಕಾದ ಜವಾಬ್ದಾರಿಯಿಂದ ರಾತ್ರೋರಾತ್ರಿ ಹೊರಟವರಿಗೆ ಹಲವು ದಿನಗಳ ಕಾಲದ ನಡಿಗೆಯಿಂದ ಆವತಿಯ ಬೆಟ್ಟದ ಹಿಂಭಾಗದ ಎಂಬ್ರಹಳ್ಳಿಯು ಆಶ್ರಯ ನೀಡುತ್ತದೆ. ಅನಂತರದಲ್ಲಿ ಅವರಿಗೆ ಅವರ ಪುಣ್ಯಫಲದಿಂದಲೆಂಬಂತೆ ದೊರೆತ ಅಪಾರವಾದ ಸಂಪತ್ತು,



ಅವರ ಧಾರ್ಮಿಕ, ಸಾಮಾಜಿಕ ಜೀವನಕ್ಕೆ ವರವಾಗುತ್ತದೆ. ಆವತಿಯ ಬೆಟ್ಟದಲ್ಲಿ ಅವರು ಮಾಡಿಸಿದ ಸೇವಾಕಾರ್ಯಗಳು ಶ್ಲಾಘನೀಯವಾದದ್ದು.

ಆವತಿಯ ಪಾಳೇಗಾರರೆಂದೇ ಪ್ರಸಿದ್ಧರಾದ ರಣಬೈರೇಗೌಡ ಮತ್ತು ಆತನ ಸಹೋದರರು ದೇವನಹಳ್ಳಿ ಹಾಗೂ ಇತರೆಡೆಗಳಲ್ಲಿ ಪ್ರಬಲರಾಗಿ ನಾಡನ್ನು ಕಟ್ಟಿ ಆಳ್ವಿಕೆಯನ್ನು ನಡೆಸುತ್ತಾರೆ. ಆವತಿ ಗ್ರಾಮದಲ್ಲಿ ಶ್ರೀದೇವಿ ಭೂದೇವಿ ಸಮೇತನಾದ ಚನ್ನಕೇಶವ ದೇವಾಲಯವನ್ನು ನಿರ್ಮಿಸಿದ್ದು, ಎಂಬ್ರಹಳ್ಳಿ ಬೆಟ್ಟದ ಮೇಲೆ ಇವರು ಕಟ್ಟಿದ ದೇವಾಲಯ ಮತ್ತು ಇಲ್ಲಿನ ತಿಮ್ಮರಾಯಸ್ವಾಮಿ ದೇವರು ಇಂದು ಪೂಜನೀಯವಾಗಿ ಕಂಡುಬರುತ್ತದೆ. ಇದಲ್ಲದೆ ದೇವನಹಳ್ಳಿಯಲ್ಲಿಯೂ ಸಹ ಗೌಡಪ್ರಭುಗಳು ತಮಗೆ ನಿಧಿಯೊಂದಿಗೆ ದೊರೆತ ಅಮೂಲ್ಯವಾದ ಶ್ರೀವೇಣುಗೋಪಾಲ ದೇವರು–ದೇವಿಯರನ್ನು ಸಹ ಪ್ರತಿಷ್ಠೆ ಮಾಡುತ್ತಾರೆ. ದೇವನದೊಡ್ಡಿ ಇಲ್ಲವೆ ದೇವಗಾನಹಳ್ಳಿಯು ಇಂದಿನ ದೇವನಹಳ್ಳಿಯಾಗಿ ಪರಿವರ್ತಿತವಾಗುವುದಕ್ಕೆ ಇವರ ಸ್ಥೈರ್ಯ–ಸಾಹಸಗಳು ಕಾರಣವಾಗಿವೆ. ಇದಕ್ಕೆ ಪೋಷಕವೆಂಬಂತೆ ಇಲ್ಲಿ ನಿರ್ಮಿಸಲಾದ ಅವರ ಕಾಲದ ಬಲಿಷ್ಠವಾದ ಮಣ್ಣಿನ ಗೋಡೆ ನಂತರದಲ್ಲಿ ಶಿಲಾರೂಪವನ್ನು ಪಡೆದುಕೊಂಡಿದೆಯೆನ್ನಬಹುದು. ಇಂತಹದೊಂದು ಹೋರಾಟದ ಕೆಚ್ಚಿನಿಂದ ಕಂಡುಬರುವಂತೆ ಇರುವ ಆವತಿಯು ದೇವನಹಳ್ಳಿ ತಾಲ್ಲೂಕಿನ ಸ್ವಾತಂತ್ರ್ಯ ಸಂಗ್ರಾಮದ ತಳಹದಿಯೇ ಆಗಿದೆಯೆಂಬುದು ವಿಚಾರಪೂರಿತವಾದದ್ದು.

ಆವತಿಯ ಇತಿಹಾಸವು ಹನ್ನೆರಡನೇ ಶತಮಾನದಿಂದ ಇಂದಿನವರೆಗೆ ನಿರಂತರವಾಗಿ ಸಾಗಿಬಂದಿರುವುದರ ಹಿನ್ನೆಲೆಯಲ್ಲಿ ಇಲ್ಲಿನ ಮಣ್ಣಿನ ಗುಣ ಮತ್ತು ನೈಸರ್ಗಿಕವಾದ ಹಿರಿಮೆಯು ಅಡಗಿದೆಯೆಂದು ಹೇಳಬಹುದು. ಇಲ್ಲಿಗೆ ಸಮೀಪದಲ್ಲಿಯೇ ಇರುವ ನಂದಿದುರ್ಗವು ಮಹಾತ್ಮ ಗಾಂಧೀಜಿಯವರಿಗೆ ಸಂಜೀವಿನಿಯಂತಾದ ಸಂಗತಿಯು ಅಧ್ಯಯನದಿಂದ ತಿಳಿದುಬರುತ್ತದೆ. ಬಾಪು ಅವರು ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಹಾಕಿಕೊಂಡ ಹಲವು ಯೋಜನೆಗಳಿಗೂ ಸಹ ಆವತಿಯ ಸನಿಹದಲ್ಲಿಯೇ ಇರುವ ನಂದಿಬೆಟ್ಟವು ಪ್ರೇರಣಾದಾಯಿಯಾಗಿ ಕಂಡುಬರುತ್ತಿರುವುದಾದರೆ ಆವತಿಯಲ್ಲಿನ ಹಲವರಿಗೆ ಮಹಾತ್ಮ ಗಾಂಧೀಜಿಯವರ ಮಾರ್ಗದರ್ಶನ ಇದ್ದಿರಬೇಕೆಂದು ಭಾವಿಸಬಹುದು. ಇದರಿಂದಾಗಿ ಆವತಿಯ ಹಲವರು ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಿರಬಹುದು. ಆದರೆ ನಮಗೆ ಇಂದು ಇವರೆಲ್ಲರ

ಪ್ರತಿನಿಧಿಯೆಂಬಂತೆ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿ'ಗಳಲ್ಲಿ ಹನುಮಂತ ರಾಯಪ್ಪನವರು ಕಂಡುಬರುತ್ತಿದ್ದಾರೆ.

## ಆವತಿಯ ಹನುಮಂತರಾಯಪ್ಪ

ಆವತಿಯ ಹನುಮಂತರಾಯಪ್ಪನವರು ಪಟೇಲ್ ಎ.ವಿ.ನಾರಾಯಣಪ್ಪ ಮತ್ತು ಅಕ್ಕಮ್ಮ ದಂಪತಿಗಳ ಪುತ್ರರಾಗಿ ಜನಿಸುತ್ತಾರೆ. ಇವರ ಜನನದ ಕಾಲವನ್ನು ೧೯೦೯ ಎಂದಿಟ್ಟುಕೊಳ್ಳಬಹುದು. ಆವತಿ ಗ್ರಾಮದಲ್ಲಿ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಪ್ರೌಢಶಿಕ್ಷಣಕ್ಕಾಗಿ ಅಂದಿನ ಕಾಲಕ್ಕೆ ಸಮೀಪದಲ್ಲಿದ್ದ ಚಿಕ್ಕಬಳ್ಳಾಪುರದ ಪ್ರೌಢಶಾಲೆಯ ಮೆಟ್ಟಿಲನ್ನು ತುಳಿಯುತ್ತಾರೆ. ಮಹಾತ್ಮ ಗಾಂಧೀಜಿಯವರು ತಮ್ಮ ಆರೋಗ್ಯ ಸುಧಾರಣೆಗಾಗಿ ನಂದಿದುರ್ಗಕ್ಕೆ ಬಂದಿದ್ದ ಸಮಯದಲ್ಲಿ ಇವರು ತರುಣರಾಗಿದ್ದು, ಇವರ ಮೇಲೆ ಸಹಜವಾಗಿಯೇ ಬಾಪೂರವರ ಪ್ರಭಾವುಂಟಾಗಿರಬಹುದು. ತಮ್ಮ ಮೂವತ್ತರ ತಾರುಣ್ಯದಲ್ಲಿ ಇವರು ಗೊಬ್ಬರಗುಂಟೆ ಮತ್ತು ಆವತಿ ಗ್ರಾಮಗಳ ಪಟೇಲರಾಗಿದ್ದದ್ದು ಸಹ ಇವರಿಗಿದ್ದ ಸಾಮಾಜಿಕ ಕಳಕಳಿಯ ಉದಾಹರಣೆಯಾಗಿದೆ. ತದನಂತರದಲ್ಲಿ ಸ್ವಾತಂತ್ರ್ಯ ಚಳುವಳಿಯ ಹೋರಾಟದ ಕಡೆ ಚಿತ್ತವುಳ್ಳವರಾಗಿ ಇಂತಹ ಪವಿತ್ರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರಾಗಿದ್ದಾರೆ. ಹೋರಾಟದ ಒಂದು ಭಾಗವಾಗಿದ್ದ ಸೇವಾದಳವು ಇವರನ್ನು ಆಕರ್ಷಿಸಿದಂತೆ ಕಂಡುಬಂದಿದ್ದು ಅದರಲ್ಲಿ ಸಹ ತಮ್ಮ ಸೇವೆ ಸಲ್ಲಿಸಿದವರಾಗಿದ್ದಾರೆ.

ಆವತಿಯ ಹನುಮಂತಪ್ಪನವರು ೧೯೩೫ರಿಂದ ೧೯೪೫ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರೆಂದು ತಿಳಿದುಬರುತ್ತದೆ. ಇದಲ್ಲದೆ ಇವರು ಸ್ವಾತಂತ್ರ್ಯಾನಂತರದಲ್ಲಿ ಸಂಸ್ಥಾ ಕಾಂಗ್ರೆಸ್, ಜನತಾ ಪಕ್ಷಗಳಲ್ಲಿ ಪ್ರತಿಷ್ಠಿತ ಸ್ಥಾನವನ್ನು ಹೊಂದಿದ್ದರೆಂಬುದು ತಿಳಿಯುತ್ತದೆ.

## ಆರ್. ದಾಸಪ್ಪ

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಗೆ ಸೇರಿದ ರೆಡ್ಡಿಹಳ್ಳಿಯು ಸ್ವಾತಂತ್ರ್ಯ ಅಮೃತಮಹೋತ್ಸವದ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ ಗ್ರಾಮವಾಗಿದೆ. ಇತಿಹಾಸ ಪ್ರಖ್ಯಾತವಾದ ನಲ್ಲೂರಿನ ಸಮೀಪದಲ್ಲಿರುವ ಇಲ್ಲಿನ ಗ್ರಾಮದಲ್ಲಿ ಇಪ್ಪತ್ತನೇ ಶತಮಾನದ ಆದಿಯಲ್ಲಿಯೇ ಎಂದರೆ ೧೯೦೪ನೇ ಇಸವಿ ನವೆಂಬರ್ ೧೬ರಂದು ಕೆಂಪತಿಮ್ಮಣ್ಣ ಹಾಗೂ ನಾರಾಯಣಮ್ಮ ದಂಪತಿಯ ಮಗನಾಗಿ ಆರ್.ದಾಸಪ್ಪನವರು ಜನ್ಮ ತಾಳಿದ್ದಾರೆ. ಒಬ್ಬ ಸೋದರ ಮತ್ತು ಮೂರು ಜನ ಸೋದರಿಯರನ್ನು ತಮ್ಮೊಂದಿಗೆ ಹೊಂದಿದ್ದ ಇವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರೆಂಬುದು ಹೆಮ್ಮೆಪಡುವ ವಿಷಯವಾಗಿರುತ್ತದೆ. ಪದವೀಧರರೂ ಆಗಿದ್ದ ದಾಸಪ್ಪನವರಿಗೆ ಕರ್ನಾಟಕದ ಅತ್ಯಂತ ಶ್ರೇಷ್ಠ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರೊಂದಿಗೆ ಆತ್ಮೀಯವಾದ ಒಡನಾಟವಿದ್ದಿತೆಂಬುದು ತಿಳಿದುಬರುತ್ತದೆ. ಇವರು ಎಂ.ಆರ್.ಎ. ಆಗಿದ್ದ ಅವಧಿಯಲ್ಲಿ ಸಾಮಾಜಿಕ ಕಾರ್ಯಗಳನ್ನು ನೆರವೇರಿಸಿ ಪ್ರಜೆಗಳಿಗೆ ತಮ್ಮ ನಿಷ್ಠೆಯನ್ನು ತೋರ್ಪಡಿಸಿದವರಾಗಿದ್ದಾರೆ. ವಿಜಯಪುರದಿಂದ ನಲ್ಲೂರು, ಬೂದಿಗೆರೆ ಮಾರ್ಗವಾಗಿ ಬೆಂಗಳೂರಿಗೆ ರಸ್ತೆಯನ್ನು ನಿರ್ಮಾಣ ಮಾಡಿಸಿಕೊಟ್ಟ ಇವರ ಕಾರ್ಯವು ಪ್ರಶಂಸನೀಯವಾಗಿದೆ. ಇವರಿಗೆ ಜನಸೇವೆಯೇ ಜನಾರ್ದನನ ಸೇವೆಯಾಗಿತ್ತು.

## ಬಾಗಲೂರು ಕೆಂಪಯ್ಯ

ಬಾಗಲೂರು ಗ್ರಾಮವು ದೇವನಹಳ್ಳಿ ತಾಲ್ಲೂಕಿಗೆ ಸೇರಿದ್ದಾಗಿದ್ದು, ಯಲಹಂಕದಿಂದ ಸುಮಾರು ಏಳೆಂಟು ಕಿ.ಮೀ. ದೂರದಲ್ಲಿದೆ. ಇದು ಯಲಹಂಕ ನಾಡಿನ ಕೇಂದ್ರ ಪ್ರದೇಶದಲ್ಲಿದ್ದು, ಇದರ ಇತಿಹಾಸವೂ ಸಾಕಷ್ಟು ಪ್ರಸಿದ್ಧವಾಗಿದೆ. ನಾಡಪ್ರಭುಗಳ ಆಳ್ವಿಕೆಗೆ ಒಳಪಟ್ಟಿದ್ದ ಮಹತ್ವದ ಸ್ಥಳವಾಗಿದೆ. ಕನ್ನಡದ ದೊರೆಗಳೇ ಆಗಿದ್ದ ಹೊಯ್ಸಳರ ಕಾಲಕ್ಕಾಗಲೇ ಇದು ವ್ಯಾಪಕವಾದ ಪ್ರಚಾರ ಗಳಿಸಿತ್ತು. ನಾಡಪ್ರಭುಗಳ ದಕ್ಷ ಆಡಳಿತ, ನಿಸ್ವಾರ್ಥ ಸೇವೆಗಳನ್ನು ಮನಗಂಡು ಆಳಿದ ಅರಸರು ಇದನ್ನು ಅವರಿಗೆ ಬಳುವಳಿಯಾಗಿ ನೀಡಿದ್ದು ತಿಳಿದುಬರುತ್ತದೆ.

ಭಾರತ ಸ್ವಾತಂತ್ರ್ಯ ಚಳುವಳಿಯ ಸೇನಾನಿಯೊಬ್ಬರು ಬಾಗಲೂರಿಗೆ ಸೇರಿದವರೆಂಬುದು ನಾವು ಹೆಮ್ಮೆಪಟ್ಟುಕೊಳ್ಳುವ ವಿಚಾರವಾಗಿದೆ. 'ಯಲಹಂಕ ನಾಡಪ್ರಭು' ಪ್ರತಿಷ್ಠಾನವು ಇಂತಹ ಮಹಾನ್ ವ್ಯಕ್ತಿಯನ್ನು ಅವರ ತುಂಬು ಜೀವನದ ಸಮಯದಲ್ಲಿ ಗೌರವಿಸಿರುವುದು ಇದೊಂದು ನಾಡಿಗೆ ಸಂದ ಗೌರವವಾಗಿದೆ. ಬಾಗಲೂರು ಹೆಚ್.ಕೆಂಪಯ್ಯನವರೆಂದು ಪ್ರಸಿದ್ಧರಾದ ಇವರು ನಮ್ಮ ಕಣ್ಮನಗಳನ್ನು ತುಂಬಿ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಸಹ

ಗಣನೀಯ ಸ್ಥಾನವನ್ನು ಪಡೆದಿದ್ದಾರೆ. ನಾರಾಯಣಪ್ಪ ಮತ್ತು ಶ್ರೀಮತಿ ನಾಗಮ್ಮ ದಂಪತಿಗಳ ಸುಪುತ್ರರಾಗಿ ಖ್ಯಾತಿವೆತ್ತವರಾಗಿದ್ದಾರೆ.

ಬಾಗಲೂರು ಕೆಂಪಯ್ಯನವರು ೧೯೨೫ರಲ್ಲಿ ಜನಿಸಿದ್ದು, ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಮುಗಿಸಿ ಅನಂತರ ಹುಣಸಮಾರನಹಳ್ಳಿಗೆ ಮಾಧ್ಯಮಿಕ ಶಿಕ್ಷಣಕ್ಕಾಗಿ ನಡೆದು, ಬೆಂಗಳೂರಿನ ಗಾಂಧಿನಗರ ಹೈಸ್ಕೂಲಿಗೆ ಪ್ರೌಢಶಿಕ್ಷಣಕ್ಕಾಗಿ ಕ್ರಮಿಸಿ, ಕಾಲೇಜು ಶಿಕ್ಷಣಕ್ಕೆ ಬೆಂಗಳೂರು ಇಂಟರ್‌ಮೀಡಿಯಟ್ ಕಾಲೇಜಿಗೆ ದಾಪುಗಾಲು ಹಾಕಿ ಮುಗಿಸುತ್ತಾರೆ. ಇದರ ನಡುವೆ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದ್ದು, ಇವರ ಕಿರೀಟಕ್ಕೆ ಗರಿ ಮೂಡಿಸಿದಂತಾಗಿದೆ. ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಆಂಗ್ಲಭಾಷಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಶ್ರೀಯುತರು ತಮ್ಮ ಹುಟ್ಟೂರಿಗೆ ತೆರಳಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗುತ್ತಾರೆ. ಇದರ ನಂತರವೂ ಸಹ ಇವರ ಜ್ಞಾನತೃಷೆ ಇಂಗದೆ ಬೆಂಗಳೂರಿನಲ್ಲಿ ಡಿಗ್ರಿ ಕಾಲೇಜಿನಲ್ಲಿ ಬಿ.ಎ.ಶಿಕ್ಷಣ ಪಡೆದದ್ದು ಇವರ ಪ್ರತಿಭಾಸಂಪನ್ನತೆಗೆ ನಿದರ್ಶನವೆನ್ನಬಹುದು. ಇಂತಹದೊಂದು ಜ್ಞಾನದ ಅಡಿಪಾಯ ಹಾಗೂ ಸ್ವಾತಂತ್ರ್ಯಗಳ ಹಂಬಲಗಳ ಮೇಲೆ ಇವರ ಜೀವನವು ರೂಪಿತವಾದದ್ದೆಂದು ಹೇಳಬಹುದು.

ಬಾಗಲೂರು ಗ್ರಾಮಪಂಚಾಯಿತಿ ಅಧ್ಯಕ್ಷರಾಗಿ ಸುಮಾರು ೪೮ ವರ್ಷಗಳ ಕಾಲ ಸುದೀರ್ಘ ಸೇವೆಯನ್ನು ಸಲ್ಲಿಸಿದ ಕೆಂಪಯ್ಯನವರು ಬೇಸಾಯದಲ್ಲಿ ಸಹ ನಿಷ್ಣಾತರಾಗಿದ್ದು, ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಇವರಿಂದ ಸಾಕಷ್ಟು ಉಪಕಾರವಾಯಿತೆನ್ನಬಹುದು. ಬೇಸಾಯಕ್ಕೆ ಟ್ರಾಕ್ಟರ್ ಬಳಸಿಕೊಂಡ ಸಾಧನೆಯೂ ಇವರದ್ದಾಗಿದೆ. ಇದಲ್ಲದೆ ದೇವನಹಳ್ಳಿ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿಯೂ ಇವರು ಅನುಪಮವಾದ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರಿಂದ ವಿವಿಧ ಅಭಿವೃದ್ಧಿ ಕಾರ್ಯಗಳೂ ನೆರವೇರಿವೆ.

ಕೆಂಪಯ್ಯನವರು ತಮ್ಮ ಮೂವತ್ತನೇ ವಯಸ್ಸಿನಲ್ಲಿ ವಿವಾಹವಾದರು. ಐದು ಜನ ಪುತ್ರಿಯರನ್ನು, ಓರ್ವ ಪುತ್ರನನ್ನು ಪಡೆದ ಇವರದ್ದು 'ವಸುಧೈವ ಕುಟುಂಬ'ದ ರೀತಿಯೇ ಆಗಿರುವುದೆಂದು ಹೇಳಬಹುದು. ಬಾಗಲೂರಿನ ಸಂತೆಯು ಅನೇಕ ವರ್ಷಗಳಿಂದ ನಿಂತುಹೋಗಿದ್ದುದನ್ನು ಪುನರಾರಂಭ ಗೊಳಿಸಿದ ಖ್ಯಾತಿಯು ಇವರದ್ದಾಗಿರುತ್ತದೆ. ಇಪ್ಪತ್ತನೇ ಶತಮಾನದಿಂದ ಇಪ್ಪತ್ತೊಂದನೇ ಶತಮಾನದವರೆಗೆ ಸುದೀರ್ಘವಾಗಿ ಬಾಳಿ ಬದುಕಿ ಸಾರ್ಥಕ ಜೀವನವನ್ನು ನಡೆಸಿದ್ದಾರೆ.

## ಚಿಕ್ಕಬಳ್ಳಾಪುರ ತಾಲ್ಲೂಕು: ಸ್ವಾತಂತ್ರ್ಯ ಯೋಧರು

ಮಹಾತ್ಮ ಗಾಂಧೀಜಿಯವರ ಆರೋಗ್ಯ ಸುಧಾರಣೆಗೆ ಕಾರಣವಾದ ನಂದಿ ಗಿರಿಧಾಮವಲ್ಲದೆ, ಸ್ವಾತಂತ್ರ್ಯ ಸಮರದಲ್ಲಿ ವೀರಮರಣ ಹೊಂದಿದ ದೇಶಭಕ್ತರ ತಾಣವಾದ ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಪ್ರಸಿದ್ಧವಾದ ವಿರುರಾಶ್ವತ್ಥವನ್ನು ತನ್ನಲ್ಲಿ ಹೊಂದಿರುವ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಯೋಧರೆಂದು ಹಲವರನ್ನು ಗುರುತಿಸಲಾಗಿದೆ. ಪ್ರಸ್ತುತ ಚಿಕ್ಕಬಳ್ಳಾಪುರಕ್ಕೆ ಸಂಬಂಧಿಸಿದ ಮೂರು ಜನ ಮಹನೀಯರನ್ನು ಗುರುತಿಸಲಾಗಿದ್ದು, ಅವರ ಬಗ್ಗೆ ಹೆಚ್ಚಿನ ಮಾಹಿತಿಯೇನೂ ಇಲ್ಲದಿದ್ದರೂ ಇರುವಷ್ಟು ವಿಷಯಗಳನ್ನೇ ಪ್ರಸ್ತುತಪಡಿಸಲಾಗಿದೆ.

### ಪತ್ರಿಕೋದ್ಯಮದ ಭೀಷ್ಮ ತಿ.ತಾ.ಶರ್ಮ

'ನಂದಿಗಿರಿನಾಥ' 'ಕುವಳಾಲಪರವರಾಧೀಶ್ವರ' ಎಂದೇ ಕರೆದುಕೊಂಡ ಕೋಲಾರದ ಗಂಗರಸರಿಗೆ ನಂದಿದುರ್ಗವು ಪರಮಪ್ರಿಯವಾದ ಸ್ಥಳವಾದದ್ದು, ಇದರ ತಪ್ಪಲಿನ ಅನತಿ ದೂರದಲ್ಲಿರುವ ಮುಖ್ಯಸ್ಥಳ ಚಿಕ್ಕಬಳ್ಳಾಪುರ. ಇಲ್ಲಿನ ರಾಜಬೀದಿಯ 'ಪೆದ್ದಿಲ್ಲು' ವೇದ–ಸಂಸ್ಕೃತಿ, ಇತಿಹಾಸ, ಪಾಂಡಿತ್ಯಗಳಿಂದ ನಿಷ್ಣಾತರಾದವರ ಅರಮನೆಯೂ ಹೌದು. ಇಲ್ಲಿನ 'ರಾಜ'ನೆಂದೇ ಪ್ರಸಿದ್ಧರಾದವರು ಪತ್ರಿಕೋದ್ಯಮದ ಭೀಷ್ಮರಾದ ತಿರುಮಲೆ ತಾತಾಚಾರ್ಯ ಶರ್ಮ ಇವರ ಸಾರಥ್ಯದಲ್ಲಿ ನಡೆದುಕೊಂಡು ಬಂದ 'ವಿಶ್ವಕರ್ನಾಟಕ'ವು ಆರಂಭದಲ್ಲಿ ವಾರಪತ್ರಿಕೆಯಾಗಿದ್ದದ್ದು ಅನಂತರದಲ್ಲಿ ದಿನಪತ್ರಿಕೆಯೂ ಆಯಿತು. ಇಪ್ಪತ್ತನೇ ಶತಮಾನದ ಮೂರನೇ ದಶಕದಲ್ಲಿ ಆರಂಭವಾದ ಪತ್ರಿಕೆಯು ಕನ್ನಡ ಪತ್ರಿಕೋದ್ಯಮದಲ್ಲಿ ರಾರಾಜಿಸಿದ್ದಾಗಿದೆ. ಇದನ್ನು ಆರಂಭಿಸಿದ ತಿ.ತಾ.ಶರ್ಮರು ಪ್ರಾತಃಸ್ಮರಣೀಯ ಪತ್ರಕರ್ತರಾಗಿ ಬೆಳಗಿದ್ದಾರೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಬೆಂಗಳೂರನ್ನು ಕೇಂದ್ರವಾಗಿ ಹೊಂದಿ ಪ್ರಸಾರವಾಗುತ್ತಿದ್ದ

ಪತ್ರಿಕೆಯು ಚಿಕ್ಕಬಳ್ಳಾಪುರದ ಮಣ್ಣಿನಲ್ಲಿ ಮೂಡಿದ ಸ್ವರ್ಣಕುಂಭದಂತಹ ತಿರುಮಲೆ ತಾತಾಚಾರ್ಯ ಶರ್ಮರ ಧೈರ್ಯ–ಸಾಹಸಗಳ ಸಂವಹನವಾಣಿಯಾಗಿ, ಸಿಡಿಲಿನಂತೆ ಆರ್ಭಟಿಸಿದೆ. ಚಳುವಳಿಗಾರರಿಗೆ ತಮ್ಮ ಶೌರ್ಯವನ್ನು ವೃದ್ಧಿಸಿಕೊಳ್ಳುವಲ್ಲಿ ಮಾಧ್ಯಮವಾಗಿ ಬೆಳಗಿದೆ. ಇದನ್ನು ಶರ್ಮಾಜಿಯವರೇ ಕರೆದುಕೊಂಡಿರುವಂತೆ ಒಂದು ಪತ್ರಿಕೆಯೆಂದೇ ಹೇಳಬಹುದು.

ವಿಶ್ವಕರ್ನಾಟಕದ ಮೊದಲ ಸಂಚಿಕೆ ಪ್ರಕಟವಾದದ್ದು ೧೯೨೫ರ ಆಗಸ್ಟ್ ೨ನೇ ದಿನಾಂಕವಾಗಿದೆ. ತುಮಕೂರಿನ ವಕೀಲ ಕೆ.ರಂಗಯ್ಯನವರು ೧೯೨೨ರಲ್ಲಿ ಕನ್ನಡದಲ್ಲಿ ಆರಂಭಮಾಡಿದ್ದ 'ಮೈಸೂರು ಕ್ರಾನಿಕಲ್' ಪತ್ರಿಕೆಯನ್ನು ತಿ.ತಾ.ಶರ್ಮರು 'ವಿಶ್ವಕರ್ನಾಟಕ'ವೆಂದು ಬದಲಾಯಿಸಿದರು. ಇವರು ೧೯೨೫ರಲ್ಲಿ ಇದರ ಸಂಪಾದಕತ್ವದ ಹೊಣೆಯನ್ನು ವಹಿಸಿಕೊಂಡು ಅದನ್ನು ಸುಮಾರು ಮೂವತ್ತು ವರ್ಷಗಳ ಕಾಲ ನಡೆಸಿದರು. ಆದರೆ ನಡುವೆ ಕಾರಣಾಂತರಗಳಿಂದ ಸಿದ್ದವನಹಳ್ಳಿ ಕೃಷ್ಣಶರ್ಮರು ಇದರ ಸಂಪಾದಕತ್ವವನ್ನು ವಹಿಸಿದ್ದರು. ವಿಶ್ವಕರ್ನಾಟಕವು ಹಳ್ಳಿಗಳ ಪುನರುಜ್ಜೀವನ, ಕರ್ನಾಟಕದ ಏಕೀಕರಣಕ್ಕೆ ಸಂಬಂಧಿಸಿದ ಲೇಖನಗಳಿಂದ ಕೂಡಿದುದರ ಜೊತೆಗೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ ಹಲವಾರು ಸುದ್ದಿಗಳನ್ನು ಹೊತ್ತು ಪ್ರಕಟವಾಗುತ್ತಿತ್ತು. ಮಹಾತ್ಮ ಗಾಂಧಿಯವರ ಜೀವನ ಉಪದೇಶಗಳನ್ನು ಕುರಿತ 'ಗಾಂಧಿಯವರ ಆತ್ಮಚರಿತ್ರೆ'ಯನ್ನು ಖ್ಯಾತರಾದ ನಿಟ್ಟೂರು ಶ್ರೀನಿವಾಸರಾವ್ ದಂಪತಿಗಳು ಇದರಲ್ಲಿ ಧಾರಾವಾಹಿಯಾಗಿ ಬರೆದದ್ದು ವಿಶೇಷವಾಗಿದೆ. ಇದರೊಂದಿಗೆ ನಿರ್ಭೀತ ಬರಹಗಳಿಂದಾಗಿ 'ಪತ್ರಿಕೆ'ಯು ಹಲವೊಮ್ಮೆ ನಿಂತುಹೋಗಿ ಮುಂದುವರೆದದ್ದನ್ನು ಕಾಣುತ್ತೇವೆ. ಪತ್ರಿಕಾ ರಂಗದ ಇತಿಹಾಸದಲ್ಲಿ ಮುಟ್ಟುಗೋಲು ಹಾಕಿಕೊಂಡ ಕರಾಳತೆಗೆ ನಿದರ್ಶನ ಹೊಂದಿದ ಪತ್ರಿಕೆಯೆಂದರೆ ಅದು ಏಕೈಕವಾದ 'ವಿಶ್ವಕರ್ನಾಟಕ'. ಆದರೂ ತಾವು ಬೆಳೆದುಬಂದ ಹಾದಿ ಶರ್ಮರನ್ನು ಕಂಗೆಡಿಸಲಿಲ್ಲ. ಇತಿಹಾಸದ ಕಾವು–ಕೆಚ್ಚುಗಳಿಂದ ಕೂಡಿದಂತಹ ಚಿಕ್ಕಬಳ್ಳಾಪುರವೆಂಬ 'ತಾಯ್ನಾಡು' ಇದಕ್ಕೆ ಕಾರಣವಾಗಿರಬಹುದೆಂದು ಹೇಳುವುದರಲ್ಲಿ ತಪ್ಪೇನಿಲ್ಲ.

## ಕಳವಾರದ ಕೆ.ವೆಂಕಟಕೃಷ್ಣಪ್ಪ

ಭಾರತದ ಸ್ವಾತಂತ್ರ್ಯಸಂಗ್ರಾಮ ಚಳುವಳಿಯಲ್ಲಿ ದೇಶದುದ್ದಗಲಕ್ಕೆ ಲಕ್ಷಾಂತರ ದೇಶಭಕ್ತರು ಭಾಗವಹಿಸಿ ಸೆರೆಮನೆಯ ವಾಸವನ್ನು ಅನುಭವಿಸಿರುತ್ತಾರೆ. ಇದರಲ್ಲಿ ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಪಾತ್ರವೂ ಸಹ ವಿಶಿಷ್ಟವಾದದ್ದಾಗಿ ಕಂಡುಬರುತ್ತದೆ. ಅವಿಭಜಿತ ಕೋಲಾರ ಜಿಲ್ಲೆಯ ಅನೇಕ ಸ್ಥಳಗಳು ಹೋರಾಟಗಾರರ ನೆಲೆ ಆಗಿದ್ದನ್ನು ಇಂದು ಕಾಣುತ್ತಿದ್ದೇವೆ. ಮಹಾತ್ಮ ಗಾಂಧೀಜಿಯವರು ಕರ್ನಾಟಕ ರಾಜ್ಯದ ಉದಕಮಂಡಲವೆಂದೇ ಖ್ಯಾತಿ ಪಡೆದ ಕೋಲಾರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ಎರಡು ಬಾರಿ ವಿಶ್ರಾಂತಿ ಪಡೆದು ತಂಗಿದ್ದ ಕಾಲವು ಜಿಲ್ಲೆಯ ಅನೇಕ ತರುಣರಿಗೆ ಚಳುವಳಿಯಲ್ಲಿ ಧುಮುಕಲು ಪ್ರೇರಣೆಯಾಯಿತು.

ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ ಕೇಂದ್ರಸ್ಥಳವಾದ ಚಿಕ್ಕಬಳ್ಳಾಪುರ ನಗರಕ್ಕೆ ಮೂರು ಕಿ.ಮೀ. ದೂರದಲ್ಲಿ ಕಳವಾರವೆಂಬ ಗ್ರಾಮವಿದೆ. ಇದರ ಸಮೀಪದಲ್ಲಿಯೇ ಇರುವ ಸ್ಕಂದಗಿರಿಯ ತಪ್ಪಲಿನಲ್ಲಿ ಕಾಲಜ್ಞಾನದ ಕರ್ತೃವಾದ ಶ್ರೀಮದ್ ವಿರಾಟ್ ಪೋತಲೂರಿ ವೀರಬ್ರಹ್ಮೇಂದ್ರಸ್ವಾಮಿಗಳು ತಮ್ಮ ಬಾಲ್ಯವನ್ನು ಕಳೆದರೆಂಬುದು ನಮಗೆ ತಿಳಿದುಬರುವ ವಿಷಯವಾಗಿದೆ. ಇಲ್ಲಿರುವ ಪಾಪಾಗ್ನಿಮಠವು ಪ್ರಸಿದ್ಧವಾದುದು. ಇಂತಹ ಧಾರ್ಮಿಕ ಸಂಪನ್ನತೆಯಿಂದ ಕೂಡಿದ ಸ್ಥಳಕ್ಕೆ ಸನಿಹದಲ್ಲಿರುವ ಮೈಲಪ್ಪನಹಳ್ಳಿಯಲ್ಲಿ ಜನ್ಮತಳೆದು, ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟ ಚರಿತ್ರಾರ್ಹ ವ್ಯಕ್ತಿಯಾಗಿ ಪ್ರಸಿದ್ಧರಾದವರು ವೆಂಕಟಕೃಷ್ಣಪ್ಪ.

ಕಳವಾರದ ಸೀತಪ್ಪ ಮತ್ತು ಕೆಂಪಮ್ಮ ದಂಪತಿಗೆ ೧೯೧೭ ಫೆಬ್ರವರಿ ೦೪ ರಂದು ವೆಂಕಟಕೃಷ್ಣಪ್ಪ ಜನಿಸುತ್ತಾರೆ. ಇವರು ಸಮೀಪದ ಮೈಲಪ್ಪನಹಳ್ಳಿಯಲ್ಲಿ ಜನಿಸಿದರಾದರೂ ಕಳವಾರದ ವೆಂಕಟಪ್ಪನೆಂದೇ ಪ್ರಸಿದ್ಧರಾಗಿದ್ದಾರೆ. ಇವರಿಗೊಬ್ಬ ಸೋದರ (ಅಣ್ಣ) ನಾರಾಯಣಸ್ವಾಮಿಯೆಂಬುವವರಿದ್ದರು. ಇಬ್ಬರು ಸೋದರರಿಗೂ ವಿದ್ಯಾಭ್ಯಾಸಕ್ಕೆ ಹಳ್ಳಿಯಲ್ಲಿ ಅನಾನುಕೂಲವಿಲ್ಲದ ಕಾರಣ ಕಳವಾರದ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ನಂತರ ಚಿಕ್ಕಬಳ್ಳಾಪುರದ ಮಾಧ್ಯಮಿಕ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಪಡೆದವರಾಗಿದ್ದಾರೆ. ತಂದೆ ಸೀತಪ್ಪನವರು ಇವರ ಬಾಲ್ಯದಲ್ಲಿಯೇ ಎಂದರೆ ಹದಿನೈದನೇ ವಯಸ್ಸಿನಲ್ಲಿಯೇ ತೀರಿಕೊಳ್ಳುತ್ತಾರೆ. ತೀವ್ರ ಬಡತನ ಒಂದು ಕಡೆಯಾದರೆ, ತಂದೆಯವರು ತೀರಿಕೊಂಡ ದುಃಖದ ಸಮಯ ಮತ್ತೊಂದು. ಇಂತಹ ಸಮಯದಲ್ಲಿ ಕಡುಕಷ್ಟಗಳನ್ನು ಅನುಭವಿಸುತ್ತಾರೆ. ಅಮ್ಮ ದಿನನಿತ್ಯದ ಊಟ–ತಿಂಡಿಗಳಿಗೂ ಪರದಾಡಬೇಕಾಗುತ್ತದೆ. ಇಂತಹ ಸಮಯದಲ್ಲಿ

ಅಧೀರಳಾಗದ ತಾಯಿ ಕೆಂಪಮ್ಮ ತನ್ನ ಅಣ್ಣನವರನ್ನು ಕಾಡಿ ಬೇಡಿ ತನ್ನ ಹೆಸರಿಗೊಂದಿಷ್ಟು ಜಮೀನನ್ನು ಬರೆಯಿಸಿಕೊಂಡು ಕಳವಾರಕ್ಕೆ ಸಂಸಾರವನ್ನು ಸ್ಥಳಾಂತರಿಸುತ್ತಾಳೆ.

ಅಣ್ಣನಿಗಿಂತ ಓದಿನಲ್ಲಿ ಚುರುಕಾಗಿದ್ದ ವೆಂಕಟಕೃಷ್ಣಪ್ಪನವರಿಗೆ ಅಂದು ನಡೆಯುತ್ತಿದ್ದ ದೇಶದ ವಿದ್ಯಮಾನಗಳನ್ನು ಅಂದಿನ ಕಾಲಕ್ಕೇ ಲಭ್ಯವಿದ್ದ ಪತ್ರಿಕೆಗಳ ಮೂಲಕವಾಗಿ ತಿಳಿದುಕೊಳ್ಳುವ ಅಪಾರವಾದ ಕುತೂಹಲ, ಆಸಕ್ತಿಗಳು ಬೆಳೆದುಬರುತ್ತವೆ. ಇವರು ಓದುತ್ತಿದ್ದ ಶಾಲೆಗೆ ವೀರ ರಾಘವಾಚಾರ್ಯರೆಂಬುವವರು ಮುಖ್ಯೋಪಾಧ್ಯಾಯರಾಗಿರುತ್ತಾರೆ. ಇವರು ತುಂಬಾ ಶಿಸ್ತಿನಿಂದ ವಿದ್ಯಾರ್ಥಿಗಳನ್ನು ಬೆಳೆಸುತ್ತಿರುತ್ತಾರೆ. ಇವರು ದೇಶಭಕ್ತರಾಗಿ ಸಹ ಪ್ರಸಿದ್ಧರಾದವರು. ಇಂತಹವರ ಮಾರ್ಗದರ್ಶನದಲ್ಲಿ ವೆಂಕಟಕೃಷ್ಣಪ್ಪ ವಿದ್ಯಾಭ್ಯಾಸ ಪಡೆದವನಾದ. ಮುಖ್ಯೋಪಾಧ್ಯಾಯರ ಅಚ್ಚುಮೆಚ್ಚಿನ ಶಿಷ್ಯನಾಗಿದ್ದ, ಪ್ರತಿಭಾನ್ವಿತ ವಿದ್ಯಾರ್ಥಿಯ ಜೀವನಕ್ಕೊದಗಿಬಂದ ಘಟನೆಗಳೇ ಈತನ ಬದುಕಿನ ಗುರಿ ಸಾಧನೆಗಳಿಗೆ ದಾರಿದೀಪವಾಯಿತು.

ವೆಂಕಟಕೃಷ್ಣಪ್ಪನವರು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಯಾಗಿದ್ದಾಗ ನಡೆದ ಒಂದು ಸಂದರ್ಭವು ಅವರ ಸ್ವಾತಂತ್ರ್ಯ ಹೋರಾಟ ಸಂಗ್ರಾಮ ಜೀವನದಲ್ಲೊಂದು ಮಹತ್ತರ ತಿರುವನ್ನು ತಂದುಕೊಡುತ್ತದೆ. ಅದು ೧೯೩೭ರ ಅಕ್ಟೋಬರ್ ತಿಂಗಳಿನಲ್ಲೊಂದು ದಿನ ಮುಂಬಯಿಯಿಂದ ಕೆ.ಎಫ್.ನಾರಿಮನ್ ಅವರು ಬೆಂಗಳೂರಿಗೆ ಬಂದು ಭಾಷಣ ಮಾಡಿದ ಸಮಯದಲ್ಲಾದ ಪೋಲೀಸ್ ದಬ್ಬಾಳಿಕೆ ವಿರುದ್ಧವಾಗಿ ಎಲ್ಲೆಡೆ ಪ್ರತಿಭಟನೆಗಳು ನಡೆದವು. ಅದಕ್ಕೆ ಹಿಂದಿನ ವರ್ಷದಲ್ಲಷ್ಟೇ ಗಾಂಧೀಜಿಯವರು ನಂದಿಬೆಟ್ಟಕ್ಕೆ ವಿಶ್ರಾಂತಿಗಾಗಿ ಆಗಮಿಸಿ ಅಲ್ಲಿಂದ ತೆರಳುವಾಗ ಚಿಕ್ಕಬಳ್ಳಾಪುರದಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣ ಮಾಡಿ ತೆರಳಿದ್ದರು.

ಚಿಕ್ಕಬಳ್ಳಾಪುರದಲ್ಲಿ ಎಸ್.ಎಸ್.ಎಲ್.ಸಿ. ಓದುತ್ತಿದ್ದ ವಿದ್ಯಾರ್ಥಿ ವೆಂಕಟಕೃಷ್ಣಪ್ಪ ವಿದ್ಯಾರ್ಥಿಗಳ ಮೆರವಣಿಗೆಯ ಮುಂದಾಳತ್ವ ವಹಿಸುತ್ತಾರೆ, ದೇಶಸೇವೆ ಮಾಡುವ ಪಣ ತೊಡುತ್ತಾರೆ, ಖಾದಿ ಧರಿಸಲು ನಿರ್ಧರಿಸುತ್ತಾರೆ. ಮಾಂಸಾಹಾರವನ್ನೂ ವರ್ಜಿಸುತ್ತಾರೆ. ಇದರೊಂದಿಗೆ ಪಕ್ಕದ ಗ್ರಾಮದಲ್ಲಿನ ಐವತ್ತು ಮಂದಿ ಸಹ ಮಾಂಸಾಹಾರ ತ್ಯಜಿಸುತ್ತಾರೆ. ವೆಂಕಟಕೃಷ್ಣಪ್ಪನವರು ಸದಾಕಾಲ ಪತ್ರಿಕೆಗಳ ಸುದ್ದಿಯ ಕಡೆ ಗಮನವಿಟ್ಟಿರುತ್ತಾರೆ. ಇದರಿಂದ ಅವರಿಗೆ ರಾಜಕೀಯ ವಿದ್ಯಮಾನಗಳು ಅರಿವಾಗುತ್ತಿರುತ್ತವೆ. ಭಾಷ್ಯಂ ರವರ ಬಂಧನ,



ಸಂಯುಕ್ತ ಪ್ರಜಾಪಕ್ಷ ಕಾಂಗ್ರೆಸ್‌ನಲ್ಲಿ ವಿಲೀನಗೊಂಡದ್ದು, ಟಿ.ಸಿದ್ದಲಿಂಗಪ್ಪನವರ ನೇತೃತ್ವದಲ್ಲಿ ಕ್ರಿಯಾಸಮಿತಿಯು ಪ್ರಚಾರಕ್ಕೆ ಹೊರಟ ಸಂಗತಿಗಳೆಲ್ಲವನ್ನೂ ಸಹ ಇವರು ಮನದಟ್ಟು ಮಾಡಿಕೊಳ್ಳುತ್ತಾರೆ. ಕಾಂಗ್ರೆಸ್ ಸಭೆಗಳಲ್ಲಿ ಭಾಗವಹಿಸುತ್ತ ಬಂದ ಇವರು ಶಾಲೆಯ ಚರ್ಚಾ ವೇದಿಕೆಗಳಲ್ಲಿ ಸಹ ಪಾಲ್ಗೊಳ್ಳುತ್ತಾರೆ. ಓದಿನ ಕಡೆ ಗಮನ ಕಡಿಮೆಯಾಗುತ್ತದೆ. ಶಾಲಾ ಮಾಸ್ತರುಗಳು, ಮುಖ್ಯೋಪಾಧ್ಯಾಯರುಗಳಿಂದ ಎಚ್ಚರಿಕೆಯ ಮಾತುಗಳನ್ನು ಕೇಳುವಂತಾಗುತ್ತದೆ. ಇದರೊಂದಿಗೆ ಹಲವರು ಕಾಂಗ್ರೆಸ್ ನಾಯಕರೂ ಊರಿನಲ್ಲಿ ನಡೆಸುತ್ತಿದ್ದ ಚಟುವಟಿಕೆಗಳು ಇವರ ಮುಂದಿರುತ್ತವೆ. ವೆಂಕಟಕೃಷ್ಣಪ್ಪನವರ ಮನಸ್ಸಿನಲ್ಲಿ ಸ್ವರಾಜ್ಯದ ಕಲ್ಪನೆಯು ನಿಚ್ಚಳವಾಗುತ್ತ ಸಾಗಿ ಅವರಲ್ಲಿದ್ದ ತಾರುಣ್ಯವೂ ಇದಕ್ಕೆ ನೆರವಾಗುತ್ತದೆ. ಇದು ಅವರ ಮುಂದಿನ ಕಾರ್ಯಗಳಿಗೆ ಇಚ್ಛಾಶಕ್ತಿಯಾಗಿ ಪರಿಣಮಿಸುತ್ತದೆ.

ವೆಂಕಟಕೃಷ್ಣಪ್ಪನವರು ತಮ್ಮ ಪರೀಕ್ಷೆ ಮುಗಿದ ಕೂಡಲೇ ಚಳುವಳಿಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಸಾಗುತ್ತಾರೆ. ಅವರು ಮೊದಲು ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಹೋಗುತ್ತಾರೆ. ಇವರೊಂದಿಗೆ ಹಲವು ನಾಯಕರು ಸಹ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಅವರುಗಳೆಂದರೆ ಕೆ.ಸಿ.ವೆಂಕಟರಾಯಪ್ಪ, ಕೆ.ಎನ್.ಮುತ್ತಪ್ಪ, ಕೆ.ನಾರಾಯಣಸ್ವಾಮಿ ಮತ್ತು ಕೆ.ಬೈರಪ್ಪ. ಶಿವಪುರದಲ್ಲಿ ಧ್ವಜಸ್ತಂಭ ಕಾಯುವುದು, ಲಾಠಿ, ಬಂದೂಕುದಾರಿ ಪೋಲೀಸರಿಗೆ ಹೆದರದೆ ಧ್ವಜದಡಿಯಲ್ಲಿ ಹಗಲುಹೊತ್ತು ಸತ್ಯಾಗ್ರಹ ನಡೆಸುವುದು ಇವರ ದಿನಚರಿಯಲ್ಲಿ ಸೇರಿಹೋಗುತ್ತದೆ. ಇದು ಅವರಲ್ಲಿ ಧೈರ್ಯ ಮತ್ತು ಆತ್ಮಸ್ಥೈರ್ಯವನ್ನು ತುಂಬುತ್ತದೆ. ಶಿವಪುರದಲ್ಲಿ ನಡೆದ ಧ್ವಜಸತ್ಯಾಗ್ರಹ ಮಾತ್ರವಲ್ಲದೆ ವಿದುರಾಶ್ವತ್ಥದಲ್ಲಿ ನಡೆದ ಮತ್ತೊಂದು ಜಲಿಯನ್‌ವಾಲಾ ಬಾಗ್‌ನಂತಹ ಹತ್ಯಾಕಾಂಡವು ಇವರಲ್ಲಿ ಮತ್ತಷ್ಟು ಹೆಚ್ಚಿನ ಧೀರವ್ಯಕ್ತಿಯ ಕಾವನ್ನುಂಟುಮಾಡುತ್ತದೆ. ವಿದುರಾಶ್ವತ್ಥದ ಗೋಲಿಬಾರ್‌ನಲ್ಲಿ ಆದ ಅಮಾಯಕರ ಹತ್ಯೆ ಇವರಲ್ಲಿನ ಚಳುವಳಿಯ ಕಿಚ್ಚಿಗೆ ತುಪ್ಪ ಎರೆದಂತಾಗುತ್ತದೆ.

ವೆಂಕಟಕೃಷ್ಣಪ್ಪನವರು ಕೆ.ಜಿ.ಎಫ್. ಸತ್ಯಾಗ್ರಹದಲ್ಲಿ ಸಹ ಮೂರು ಬಾರಿ ಭಾಗವಹಿಸಿರುತ್ತಾರೆ. ಮೊದಲ ಬಾರಿಗೆ ಇವರು ಕಾಡಿನ ಅನುಭವ ಪಡೆದುಕೊಂಡರೆ, ಎರಡು ಮತ್ತು ಮೂರನೇ ಬಾರಿಗೆ ಕಾರಾಗೃಹದ ಕಠಿಣ ಶಿಕ್ಷೆಯನ್ನೂ ಅನುಭವಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಇವರ ಊರಿನಲ್ಲಿ

ಮನೆಯನ್ನು ಜಪ್ತಿ ಮಾಡಲಾಗುತ್ತದೆ. ಆದರೆ ಇವರ ತಾಯಿ ಘಟನೆಯಿಂದ ವಿಚಲಿತರಾಗದೆ ಸಮಾಧಾನದಿಂದಲೇ ಇರುತ್ತಾರೆ. ಇದು ದೇಶಭಕ್ತನ ತಾಯಿಯೊಬ್ಬಳಲ್ಲಿ ಕಂಡುಬರುವ ಮನೋಧೈರ್ಯವೆಂದೇ ನಾವು ತಿಳಿಯಬಹುದಾಗಿರುತ್ತದೆ. ಸ್ವಾತಂತ್ರ್ಯ ಬಂದನಂತರ ಎಮ್ಮೆ ಕರುಗಳನ್ನು ಹರಾಜು ಮಾಡಿದ ಹಣ ಮರಳಿ ಇವರ ಕೈಗೆ ಬರುತ್ತದೆ. ಆದರೆ ಇವರ ತಾಯಿಯ ಆಸೆಯಂತೆ ಇದನ್ನು ಕಸ್ತೂರ್‌ಬಾ ಸ್ಮಾರಕ ನಿಧಿಗೆ ಕಾಣಿಕೆಯಾಗಿ ಕೊಟ್ಟುಬಿಡುತ್ತಾರೆ. ವೆಂಕಟಕೃಷ್ಣಪ್ಪನವರೊಂದಿಗೆ ಇವರ ಅಣ್ಣ ಕೆ.ನಾರಾಯಣಸ್ವಾಮಿ, ಎ.ಮುನಿಯಪ್ಪ, ಹುಸ್ಸೇನಯ್ಯ, ಬನಪ್ಪ, ಚನ್ನಬಸಪ್ಪ, ರುದ್ರಪ್ಪ, ಕಮತನಹಳ್ಳಿ ಮುನಿನಾಗಪ್ಪನವರೂ ಸಹ ಸತ್ಯಾಗ್ರಹದಲ್ಲಿ ಪಾಲ್ಗೊಂಡಿರುತ್ತಾರೆ.

ಮೈಸೂರಿನಲ್ಲಿ ೧೯೩೯ರಲ್ಲಿ ನಡೆದ ಸತ್ಯಾಗ್ರಹದಲ್ಲಿ ಸಹ ವೆಂಕಟಕೃಷ್ಣಪ್ಪನವರ ಸತ್ಯಾಗ್ರಹ ಚಳುವಳಿಯಲ್ಲಿನ ಜೀವನದ ಒಂದು ಮುಖ್ಯ ಘಟ್ಟವಾಗಿದೆ. ವ್ಯಾಸಂಗ ನಿಲ್ಲಿಸಿ ಜೀವನ ನಿರ್ವಹಣೆಗೆ ಕೃಷಿಯಲ್ಲಿ ತೊಡಗಿಕೊಂಡಿದ್ದ ಇವರಿಗೆ ಸತ್ಯಾಗ್ರಹದಲ್ಲಿ ಭಾಗವಹಿಸಲು ಕರೆ ಬಂದಾಗ ಸ್ವಲ್ಪವೂ ತಡಮಾಡದೆ ಮೈಸೂರಿಗೆ ತೆರಳುತ್ತಾರೆ. ಪ್ರತಿದಿನವೂ ಎಂ.ಎನ್. ಜೋಯಿಸರ ಮನೆಯಿಂದ ಮೆರವಣಿಗೆಯಲ್ಲಿ ಹೊರಟು, ಪೊಲೀಸ್ ಠಾಣೆಗೆ ಬಂದು ಅದರ ಮಹಡಿಗೆ ಬರೆಯಲಾಗಿದ್ದ ಹ್ಯಾಮಿಲ್ಟನ್‌ನ ಹೆಸರನ್ನು ಅಳಿಸಲು ಮುನ್ನುಗ್ಗುವ ಪ್ರಯತ್ನ ಮಾಡಲಾಗುತ್ತಿದ್ದು, ಪಹರೆ ಕಾಯುವ ಪೊಲೀಸರು ಇದನ್ನು ತಡೆಯುತ್ತಿರುತ್ತಾರೆ. ಸಂಜೆಯವರೆಗೆ ಅಲ್ಲಿಯೇ ಧರಣಿ ನಡೆಸಿ ಸಂಜೆಯ ವೇಳೆಗೆ ಮನೆಗೆ ತೆರಳುತ್ತಾರೆ. ಇಂತಹ ಸಮಯದಲ್ಲಿ ಸರಿಯಾದ ಆಹಾರ ದೊರೆಯುತ್ತಿರಲಿಲ್ಲ. ಇದರಿಂದಾಗಿ ಐದಾರು ದಿನಾಳಾಗುವಷ್ಟರಲ್ಲಿ ಇವರ ಆರೋಗ್ಯದಲ್ಲಿ ಏರುಪೇರಾದ ಕಾರಣ ವೆಂಕಟಕೃಷ್ಣಪ್ಪ ತಮ್ಮ ಮನೆಗೆ ಹಿಂತಿರುಗಬೇಕಾಗುತ್ತದೆ.

ಅಮ್ಮನ ಆಶೀರ್ವಾದವನ್ನು ಹೊತ್ತು ಮತ್ತೆ ಮೈಸೂರಿಗೆ ತೆರಳಿದ ವೆಂಕಟಕೃಷ್ಣಪ್ಪನವರು, 'ಟೌನ್‌ಹಾಲ್ ಸತ್ಯಾಗ್ರಹ'ದಲ್ಲಿ ಭಾಗವಹಿಸಿ ಶಿಕ್ಷೆಗೆ ಗುರಿಯಾಗುತ್ತಾರೆ. ತೀರ್ಥಹಳ್ಳಿ ಜೈಲಿಗೆ ಕಳುಹಿಸಿರುತ್ತಾರಾದರೂ, ಮತ್ತೊಮ್ಮೆ ಅಲ್ಲಿಂದ ಕರೆಸಿಕೊಂಡು ಮೈಸೂರು ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಅವರ ಭಾಷಣ ರಾಜದ್ರೋಹವಾದದ್ದೆಂಬ ಕಾರಣಕ್ಕೆ ಅವರಿಗೆ ಇಪ್ಪತ್ತು ತಿಂಗಳ ಶಿಕ್ಷೆಯನ್ನು ವಿಧಿಸಲಾಗುತ್ತದೆ. ತೀರ್ಥಹಳ್ಳಿ, ಮೈಸೂರು, ಶಿವಮೊಗ್ಗ, ಬೆಂಗಳೂರು ಸೆಂಟ್ರಲ್ ಜೈಲುಗಳಲ್ಲಿನ ಕಾರಾಗೃಹಗಳಲ್ಲಿ ಜೈಲುವಾಸವನ್ನು ಅನುಭವಿಸಿ, ಜಯಚಾಮರಾಜ ಒಡೆಯರ್ ಅವರ ಪಟ್ಟಾಭಿಷೇಕದ ದಿನದಂದು ಬಿಡುಗಡೆಯಾಗುತ್ತದೆ.



ವೆಂಕಟಕೃಷ್ಣಪ್ಪನವರು ಅನುಭವಿಸಿದ ಜೈಲುವಾಸ ಘೋರವಾದುದಾಗಿತ್ತೆಂದು ನಮಗೆ ತಿಳಿದುಬರುತ್ತದೆ. ನ್ಯಾಯಾಧೀಶರಾದ ರಣಜೋತ್ ಸಿಂಗ್ ಅವರು ಅವರಿಗೆ ೦೭ ತಿಂಗಳ ಕಾರಾಗೃಹ ಶಿಕ್ಷೆಯನ್ನು ವಿಧಿಸುತ್ತಾರೆ. ಇವರ ಮೇಲೆ ಹೊರಿಸಿದ ಆಪಾದನೆಯ ವಿಚಾರಣೆ ಒಂದು ವಾರಕಾಲ ನಡೆದಂತೆ ತಿಳಿದುಬರುತ್ತದೆ. ಇವರನ್ನು ಮತ್ತು ಇವರ ಜೊತೆಯವರನ್ನು ತೀರ್ಥಹಳ್ಳಿಯಲ್ಲಿ ನೂತನವಾಗಿ ಪರಿವರ್ತಿಸಲಾಗಿದ್ದ ಗಂಧದ ಕೋಠಿಗೆ ಕಳುಹಿಸಲಾಯಿತಂತೆ. ಜೈಲಿನ ನಿಯಮಕ್ಕನುಗುಣವಾಗಿ ಸಮವಸ್ತ್ರ ಬಳಸಬೇಕಾಗಿತ್ತು. ಸ್ವಂತ ಉಡುಪುಗಳಿಗೆ ನಿಷೇಧ ಹೇರಲಾಗಿತ್ತು. ಕಾವಲುಗಾರರು ತೀವ್ರ ನಿಗಾ ಇಡುತ್ತಿದ್ದರು.

ಜೈಲಿನಲ್ಲಿ ಆಸ್ಪತ್ರೆಯೂ ಇದ್ದು, ಬೆಳಗಿನ ಹೊತ್ತು ವೈದ್ಯರು ಬಂದು ಹೋಗುತ್ತಿದ್ದರು. ಅವರು ಬಂದಾಗ ಮಾತ್ರ ಅವರಿಂದ ಹಾಲು ಬ್ರೆಡ್ ಸಕ್ಕರೆಗೆ ಪರವಾನಗಿ ಬರೆಯಿಸಿಕೊಂಡು ಹೋಗಬೇಕಾಗಿತ್ತು, ಇದು ದಾಖಲಾಗುತ್ತಿತ್ತು. ಇನ್ನು ಇವರಿಗೆ ನೀಡಬೇಕಾದದ್ದನ್ನು ಇವರ ಹೆಸರಿನಲ್ಲಿ ಮತ್ತೊಬ್ಬರು ಬರೆಸಿಕೊಂಡು ಹೋದಾಗ ಅವರ ತಪ್ಪನ್ನು ತಿದ್ದಲು ಇವರು ಒಂದು ದಿನ ಉಪವಾಸವನ್ನೂ ಮಾಡುತ್ತಾರೆ. ಇವರಿಗೆ ವಿಧಿಸಲಾಗಿದ್ದ ಏಳು ತಿಂಗಳ ಶಿಕ್ಷೆ ಅದು ಮತ್ತೂ ೨೦ ತಿಂಗಳೂ ಸೇರಿದಂತೆ ಒಟ್ಟು ೨೭ ತಿಂಗಳು ಇವರು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ವೆಂಕಟಕೃಷ್ಣಪ್ಪನವರು ತೀರ್ಥಹಳ್ಳಿ ಜೈಲಿನಲ್ಲಿ ಆರು ತಿಂಗಳು ಕಳೆಯುವಷ್ಟರಲ್ಲಿ ಅನೇಕರಿಗೆ ಅಲ್ಲಿಂದ ಬಿಡುಗಡೆಯಾಗುತ್ತದೆ. ದೇಶದ ಎಲ್ಲೆಡೆಯೂ ಜೈಲುಗಳಲ್ಲಿ ಸತ್ಯಾಗ್ರಹಿಗಳ ಸಂಖ್ಯೆಯೂ ಕಡಿಮೆಯಾಗಿ ವೆಂಕಟಕೃಷ್ಣಪ್ಪ ಮತ್ತು ತಂಡವನ್ನು ಬೆಂಗಳೂರಿನ ಸೆಂಟ್ರಲ್ ಜೈಲಿಗೆ ವರ್ಗಾವಣೆ ಮಾಡಲಾಗುತ್ತದೆ. ಇವರು ಬೆಂಗಳೂರಿಗೆ ಬಂದಾಗ ಚಿಕ್ಕಬಳ್ಳಾಪುರದವರೇ ಆಗಿದ್ದ ಕೆ.ಸಂಪಂಗಿರಾಮಯ್ಯ ಹಾಜರಿರುತ್ತಾರೆ.

ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿದ್ದಾಗ ವೆಂಕಟಕೃಷ್ಣಪ್ಪನವರು ನೇಣುಶಿಕ್ಷೆಗೆ ಒಳಗಾದ ವ್ಯಕ್ತಿಗಳ ಬಗ್ಗೆ ತಮಗಾದ ಅನುಭವವನ್ನು ಹೇಳಿಕೊಂಡಿದ್ದಾರೆ. ಶಿವಮೊಗ್ಗ ಜಿಲ್ಲೆ ಈಸೂರಿನಲ್ಲಿ ನಡೆದ ಘರ್ಷಣೆಯಲ್ಲಿ ಅಮಲ್ದಾರ್ ಚನ್ನಕೃಷ್ಣಪ್ಪ ಮತ್ತು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಕೆಂಚಪ್ಪ ಎಂಬಿಬ್ಬರು ದುರ್ದೈವಿಗಳು ಸಾವಿಗೀಡಾಗುತ್ತಾರೆ. ಇಂತಹ ದುರ್ಘಟನೆಯಿಂದಾಗಿ

ಹಲವರಿಗೆ ಜೀವಾವಧಿಯವರೆಗೆ ಶಿಕ್ಷೆ ವಿಧಿಸಲಾಗಿದ್ದು, ಐವರಿಗೆ ಮರಣದಂಡನೆಯೂ ಘೋಷಿಸಲಾಗುತ್ತದೆ. ವೆಂಕಟಕೃಷ್ಣಪ್ಪನವರು ಜೈಲಿನಲ್ಲಿದ್ದಾಗಲೇ ಐವರಿಗೂ ಮರಣದಂಡನೆಯಾದದ್ದು, ಅಂದಿನ ಸಂದರ್ಭದಲ್ಲಿ ಇದಕ್ಕೆ ಗುರಿಯಾದವರು ದೇಶಭಕ್ತಿ ಗೀತೆಗಳನ್ನು ಹೇಳಿಕೊಳ್ಳುತ್ತಾ ಸಾಗಿ ಗಲ್ಲಿನ ಕುಣಿಕೆಗೆ ತುತ್ತಾದದ್ದು ಇವರ ಸ್ಮರಣೆಯಲ್ಲಿದ್ದ ವಿಚಾರವಾಗಿದೆ. ಇಂತಹ ಅಪೂರ್ವವಾದ ಘಟನೆಗಳು ವೆಂಕಟಕೃಷ್ಣಪ್ಪ ಅವರ ಸ್ವಾತಂತ್ರ್ಯ ಚಳುವಳಿಯ ಅಧ್ಯಾಯಗಳಲ್ಲಿ ಸೇರಿಹೋಗಿವೆ.

ವೆಂಕಟಕೃಷ್ಣಪ್ಪನವರ ತಾಯಿ ಕೆಂಪಮ್ಮನವರು ಮಾತೃವಾತ್ಸಲ್ಯದಿಂದ ಕೂಡಿದವರಾಗಿದ್ದರು. ಇವರು ಒಮ್ಮೆ ಪ್ಲೇಗ್ ಮಾರಿಗೆ, ಮತ್ತೊಮ್ಮೆ ಕಾಲರಾ ಮಾರಿಗೆ ತುತ್ತಾಗಿದ್ದರಂತೆ. ಅನೇಕರು ಕಳವಾರ ಗ್ರಾಮದಲ್ಲಿ ಅಸುನೀಗಿದರಂತೆ. ಆದರೆ ನಾಟಿ ವೈದ್ಯರಾದ ವೆಂಕಟರಾಮಪ್ಪನವರು ಈಕೆಯನ್ನು ತಮ್ಮ ಔಷಧಗಳಿಂದ ಉಳಿಸಿರುತ್ತಾರೆ. ವೆಂಕಟಕೃಷ್ಣಪ್ಪನವರಿಗೆ ಸುದ್ದಿ ಗೊತ್ತಾದ ಕೂಡಲೇ ಜೈಲಿನಿಂದಲೇ ಪತ್ರ ಬರೆದಿರುತ್ತಾರೆ. ತನಗೆ ಪೆರೋಲ್ ಮೇಲೆ ಬರಲು ಅವಕಾಶವಿದೆಯೆಂದೂ, ಅದಕ್ಕೆ ತಾಯಿ ಅನುಮತಿಸಬೇಕೆಂದೂ ಕೇಳಿಕೊಂಡಿರುತ್ತಾರೆ. ಆದರೆ ತಾಯಿಯಾದರೋ, ಯಾವುದೇ ಕಾರಣಕ್ಕೂ ಮಗ ಬರಬಾರದೆಂದೂ, ಶಿಕ್ಷೆಯನ್ನು ಪೂರ್ಣ ಅನುಭವಿಸಿ ಬರಬೇಕೆಂದೂ, ತಾನು ದೇವರ ದಯೆಯಿಂದ ಆಯುಷ್ಯವಂತಳಾಗಿ ಇರುವುದಾಗಿಯೂ ಪತ್ರವನ್ನು ಬರೆಸುತ್ತಾಳೆ. ಇಂತಹ ತಾಯನ್ನು ಪಡೆದಿರುವುದು ತನ್ನ ಪುಣ್ಯವೆಂದು ವೆಂಕಟಕೃಷ್ಣಪ್ಪನವರು ಪತ್ರವನ್ನು ಓದಿಕೊಂಡು ಬಿಕ್ಕಿ ಬಿಕ್ಕಿ ಅತ್ತದ್ದು ಮಾತ್ರವಲ್ಲದೆ, ಅಲ್ಲಿಂದಲೇ ತನ್ನ ತಾಯಿಗೆ ಕೈಮುಗಿದು ನಮಸ್ಕಾರಗಳನ್ನು ಸಲ್ಲಿಸಿದರಂತೆ. ಇಂತಹ ಕರುಳು ಸಂಬಂಧದ ಘಟನೆಗೂ ಸಹ ವೆಂಕಟಕೃಷ್ಣಪ್ಪನವರು ಪಾತ್ರರಾಗಿರುತ್ತಾರೆ.

ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರು ದೈವಾಧೀನರಾದಾಗ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಪಟ್ಟಾಭಿಷೇಕ ಮಹೋತ್ಸವ ನೆರವೇರುತ್ತದೆ. ಇಂತಹ ಸುಸಂದರ್ಭದಲ್ಲಿ ಎಲ್ಲಾ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕೆಂಬ ಮಹತ್ತರ ತೀರ್ಮಾನವನ್ನು ತೆಗೆದುಕೊಳ್ಳಲಾಗುತ್ತದೆ. ಸೆಂಟ್ರಲ್ ಜೈಲಿನಲ್ಲಿ ಒಂದು ವರ್ಷ ಒಂದು ತಿಂಗಳ ಶಿಕ್ಷೆ ಅನುಭವಿಸಿದ ವೆಂಕಟಕೃಷ್ಣಪ್ಪನವರಿಗೂ ಜೈಲಿನಿಂದ ಬಿಡುಗಡೆಯ ಭಾಗ್ಯ ದೊರೆಯುತ್ತದೆ. ಅವರು ಕಳವಾರ ಗ್ರಾಮಕ್ಕೆ ಹಿಂದಿರುಗುತ್ತಾರೆ. ತಾಯಿಯ ಪ್ರೀತಿ–ವಾತ್ಸಲ್ಯಗಳು



ಇವರ ಮೇಲೆ ಹರಿದು ಬಂದು ಆಕೆಯ ಕೈತುತ್ತು ಉಣ್ಣುವ ಸೌಭಾಗ್ಯ ಲಭಿಸುತ್ತದೆ. ಚಿಕ್ಕಬಳ್ಳಾಪುರ ಪಟ್ಟಣದಲ್ಲಿ ಬಹಿರಂಗ ಸಭೆ ಏರ್ಪಟ್ಟು ಇವರನ್ನು ಅಭಿನಂದಿಸಲಾಗುತ್ತದೆ.

ಗಾಂಧೀಜಿಯವರು 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ಕ್ವಿಟ್ ಇಂಡಿಯಾ ಚಳುವಳಿಯನ್ನು ೧೯೪೨ರ ಆಗಸ್ಟ್ ೯ರಂದು ಆರಂಭಿಸಿದರು. ಭಾರತದ ಪ್ರಜೆಗಳು ಸ್ವಾತಂತ್ರ್ಯಕ್ಕಾಗಿ ಮಡಿಯಲೂ ಸಿದ್ಧರಾಗಬೇಕೆಂಬ ಕರೆಗೆ ಓಗೊಟ್ಟು ದೇಶದಾದ್ಯಂತ ಆರಂಭವಾದ ಚಳುವಳಿಯಲ್ಲಿ ನಾಯಕರುಗಳನ್ನು ಭಾರತದ ರಕ್ಷಣಾ ಕಾಯ್ದೆಯಡಿ ಬಂಧಿಸುವ ಕಾರ್ಯವೂ ಆರಂಭವಾಯಿತು. ಆದರೆ ವೆಂಕಟಕೃಷ್ಣಪ್ಪನವರು ಮಾತ್ರ ಗ್ರಾಮಾಂತರ ಪ್ರದೇಶದಲ್ಲಿ ಪೊಲೀಸರ ಕಣ್ಣುತಪ್ಪಿಸಿ ಚಳುವಳಿಯಲ್ಲಿ ತೊಡಗುವಂತೆ ಜನರನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತಲ್ಲೀನರಾದರು. ಕಳವಾರದವರೇ ಆದ ಕೆ.ಎಂ.ನರಸಪ್ಪ ಎಂಬುವವರು ಬೆಂಗಳೂರಿನ ಕಂಟೋನ್ಮೆಂಟ್‌ನಲ್ಲಿ ವಾಸಮಾಡುತ್ತಿದ್ದವರು ಅಲ್ಲಿಯ ತಮ್ಮ ಸ್ನೇಹಿತರೊಂದಿಗೆ ಕಳವಾರಕ್ಕೆ ಆಗಮಿಸಿದ್ದಾಗ ಅವರಿಗೆ ರಹಸ್ಯ ಜಾಗದಲ್ಲಿ ಅಡಗಿಕೊಳ್ಳಲು ನೆರವಾದರು. ಭೂಗತ ಚಳುವಳಿಯ ಭಾಗವಾಗಿದ್ದ ಕರಪತ್ರ ಮುದ್ರಣ ಮತ್ತು ಅದನ್ನು ಹಂಚುವ ಕಾರ್ಯದಲ್ಲಿ ವೆಂಕಟಕೃಷ್ಣಪ್ಪನವರು ತೊಡಗಿಕೊಂಡಿದ್ದರು. ಒಮ್ಮೆ ದೊಡ್ಡಬಳ್ಳಾಪುರಕ್ಕೆ ಇದರ ವಿಲೇವಾರಿಗೆ ಹೋಗಿದ್ದಾಗ ಇವರು ಮಫ್ತಿಯಲ್ಲಿದ್ದ ಪೊಲೀಸರ ಕಣ್ಣು ತಪ್ಪಿಸಿಕೊಂಡು ಬರುವುದಕ್ಕೆ ಹರಸಾಹಸಪಡಬೇಕಾಯಿತು. ಪೊಲೀಸರು ವೆಂಕಟಕೃಷ್ಣಪ್ಪನವರ ದಸ್ತಗಿರಿಗಾಗಿ ಕಳವಾರಕ್ಕೆ ಎಡತಾಕುತ್ತಾರೆ. ಇದರಿಂದಾಗಿ ಸಂದಿಗ್ಧ ಸನ್ನಿವೇಶವುಂಟಾಗುತ್ತದೆ. ತಮ್ಮ ಸಂಪರ್ಕವನ್ನು ಇರಿಸಿಕೊಂಡಿದ್ದ ಇತರರಿಗೆ ತೊಂದರೆಯಾಗಬಾರದೆಂಬ ಅರಿವಿನಿಂದಾಗಿ ರಾತ್ರಿ ಮನೆಯಲ್ಲಿಯೇ ಉಳಿದು ಪೊಲೀಸರಿಂದ ಬಂಧಿಸಲ್ಪಟ್ಟು ಸೆಂಟ್ರಲ್ ಜೈಲನ್ನು ಸೇರುತ್ತಾರೆ.

ಕೋಲಾರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸುದೀರ್ಘಕಾಲ ಜೈಲಿನಲ್ಲಿದ್ದ ಏಕೈಕ ವ್ಯಕ್ತಿಯೆಂದರೆ ಅವರು ಮತ್ತಾರೂ ಅಲ್ಲ ವೆಂಕಟಕೃಷ್ಣಪ್ಪ ಅವರೇ ಆಗಿದ್ದಾರೆ. ಅವರು ೧೯೪೨–೪೩ರಲ್ಲಿ ಜೈಲಿನಲ್ಲಿದ್ದಾಗ ಪ್ರತಿ ತಿಂಗಳ ೯ನೇ ತಾರೀಖಿನಂದು ಉಪವಾಸವ್ರತವನ್ನು ಆಚರಿಸುತ್ತಿದ್ದರು. ಇದು ಆಗಸ್ಟ್ ೯ರಂದು ಆರಂಭವಾದ ಚಳುವಳಿಯ ಸಂಕೇತವೂ ಹೌದು. ಜೈಲಿನಲ್ಲಿದ್ದ ವೇಳೆಯಲ್ಲಿ ಅವರು ಹಿಂದಿ, ತಮಿಳು, ಉರ್ದು ಮುಂತಾದ ಭಾಷೆಗಳ ಲಿಪಿ ಪರಿಚಯವನ್ನು ಮಾಡಿಕೊಂಡರು. ಅವರಿಗೆ ಜೈಲಿನಲ್ಲಿ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ,

ಸಮಾಜಶಾಸ್ತ್ರ, ಜ್ಯೋತಿಷ್ಯಾಸ್ತ್ರಗಳೆಲ್ಲದರ ಪರಿಚಯವೂ ಆಯಿತೆಂದು ತಿಳಿಯಬಹುದು. ಇವರೆಲ್ಲರೂ ಜೈಲಿನಲ್ಲಿ ಪ್ರಾರ್ಥನೆ ಮಾಡುತ್ತಿದ್ದ ವೇಳೆಯಲ್ಲಿ ಕೆಲವು ತರುಣರು ಮಾಡಿದ ಧ್ವಜಾರೋಹಣ ಸಂದರ್ಭದಲ್ಲಿ ಲಾಠಿಚಾರ್ಜ್ ಆಗುತ್ತದೆ. ಆಗ ಕೆಲವರ ತಲೆ, ತೋಳು, ಕಾಲುಗಳಿಗೂ ಪೆಟ್ಟಾಗುತ್ತದೆ. ಅನೇಕರಿಗೆ ರಕ್ತವೂ ಚಿಮ್ಮುತ್ತದೆ. ಇಂಥವರಲ್ಲಿ ಪೆಟ್ಟು ತಿಂದು ಮೂರ್ಛೆ ಹೋದ ಪಂಡಿತ ಡಾ. ಪಾರ್ಥನಾರಾಯಣ ದೀಕ್ಷಿತರು ಇವರ ಸ್ಮೃತಿಪಟಲದಲ್ಲಿ ಉಳಿದುಹೋದವರಾಗಿದ್ದಾರೆ. ಯಗವಕೋಟೆ ಚಂದ್ರಶೇಖರರೆಡ್ಡಿ, ಆನೇಕಲ್ ದೇವರಕೊಂಡಪ್ಪನವರೂ ಸೇರಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರದಲ್ಲಿ ವೆಂಕಟಕೃಷ್ಣಪ್ಪನವರ ವಿವಾಹ ನೆರವೇರುತ್ತದೆ. ದೇವನಹಳ್ಳಿ ತಾಲ್ಲೂಕಿನ ದೊಡ್ಡಜಾಲ ಗ್ರಾಮದ ಚೌಡಪ್ಪ ಮತ್ತು ಅಕ್ಕಯ್ಯಮ್ಮ ದಂಪತಿಗಳ ಮಗಳಾದ ಜಯಮ್ಮ ಎಂಬುವವರೊಂದಿಗೆ ಇವರ ಮದುವೆ ನಡೆಯುತ್ತದೆ. ತಮ್ಮ ಮಕ್ಕಳಿಗೆ ದೇಶಭಕ್ತರ ಹೆಸರನ್ನೇ ಇಡುತ್ತಾರೆ. ಇದು ಇವರ ದೇಶಾಭಿಮಾನಕ್ಕೆ ಸಾಕ್ಷಿಯಾಗಿದೆ. ಇವರ ಮಕ್ಕಳೂ ಸಹ ಸರ್ಕಾರಿ ಉದ್ಯೋಗವನ್ನರಸದೆ ಕೃಷಿಕರೇ ಆಗುತ್ತಾರೆ. ವೆಂಕಟಕೃಷ್ಣಪ್ಪನವರು ತಮ್ಮ ತಾಯಿಯ ಮೇಲಿದ್ದ ಅಭಿಮಾನ ಪ್ರೀತಿಗಳನ್ನು ವರ್ಷಕ್ಕೊಮ್ಮೆ ತಮ್ಮ ತಾಯಿಯ ಹೆಸರಿನಲ್ಲಿ ವಿಧವೆಯರಿಗೆ ಸೀರೆ–ಕುಪ್ಪಸಗಳನ್ನು ವಿತರಿಸುವುದರ ಮೂಲಕ ವ್ಯಕ್ತವಾಗಿದೆ.

ವೆಂಕಟಕೃಷ್ಣಪ್ಪನವರದು ಸರಳವಾದ ಜೀವನವಾಗಿತ್ತು. ಇವರು ಆಜಾನುಬಾಹುಗಳಾಗಿ ಸದಾ ಖಾದಿಯನ್ನೇ ತೊಡುತ್ತಿದ್ದರು. ಇವರ ನಿಗರ್ವಿತನದಿಂದ ಇವರಿಗೆ ಸಮಾಜದಲ್ಲಿ ಉನ್ನತವಾದ ಹುದ್ದೆಗಳೂ ಸಹ ಲಭ್ಯವಾಯಿತೆಂದು ತಿಳಿಯಬಹುದು. ಮೊದಲಿಗೆ ಇವರು ತಾಲ್ಲೂಕು ಅಭಿವೃದ್ಧಿ ಸಮಿತಿಗೆ ಮೂರು ವರ್ಷಗಳ ಕಾಲ ಅಧ್ಯಕ್ಷರಾಗಿದ್ದರು. ಇವರು ಕೃಷಿ ಚಟುವಟಿಕೆಗಳಿಗೆ ಅವಕಾಶವಾಗುವಂತೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವನ್ನು ಸ್ಥಾಪನೆ ಮಾಡಿದವರಾಗಿರುತ್ತಾರೆ. ಇವರು ಅಧ್ಯಕ್ಷರಾಗಿ ೧೮ ವರ್ಷಗಳ ಕಾಲ ಸೇವೆ ಸಲ್ಲಿಸುರುತ್ತಾರೆ. ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಐದು ವರ್ಷಗಳ ಸೇವೆಯನ್ನೂ ಸಲ್ಲಿಸಿದ್ದಾರೆ. ಎರಡನೇ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾದರಾದರೂ ಕಡೆಯ ವರ್ಷದಲ್ಲಿ ಅದನ್ನು ಕೆ.ಬಿ.ಪಿಳ್ಳಪ್ಪನವರಿಗೆ ವಹಿಸಿಕೊಟ್ಟಿರುತ್ತಾರೆ. ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ನಿರ್ದೇಶಕರಾಗಿ ಇವರು ಹದಿಮೂರು ವರ್ಷಗಳ ಸೇವೆ ಸಲ್ಲಿಸಿದರು.



೧೯೬೭ರಲ್ಲಿ ವಿಧಾನಸಭೆಗೆ ಸ್ಪರ್ಧಿಸಿ ಅಲ್ಪಮತಗಳ ಅಂತರದಿಂದ ಪರಾಜಿತರಾದರು. ಇವರು ತಮ್ಮ ಸ್ವಾತಂತ್ರ್ಯ ಹೋರಾಟದ ಅನುಭವಗಳನ್ನು 'ಸ್ವಾತಂತ್ರ್ಯ ಹೋರಾಟದ ನೆನಪುಗಳು' ಮತ್ತು 'ಕೋಲಾರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು' ಎಂಬ ಎರಡು ಕೃತಿಗಳ ಮೂಲಕ ದಾಖಲಿಸಿರುತ್ತಾರೆ. ಆದರೆ ಇವೆರಡು ಪುಸ್ತಕಗಳ ಬಗ್ಗೆ ಮಾಹಿತಿ ದೊರೆಯುತ್ತಿಲ್ಲವೆಂದೂ ಸಹ ತಿಳಿದುಬರುತ್ತದೆ. ಸಾರ್ಥಕ ಬದುಕನ್ನು ಬಾಳಿ, ಜನಮನದಲ್ಲಿ ಅಚ್ಚಳಿಯದ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡ ವೆಂಕಟಕೃಷ್ಣಪ್ಪನವರು ದಿನಾಂಕ ೨೪–೦೫–೨೦೦೬ರಂದು ಇಹಲೋಕ ತ್ಯಜಿಸುತ್ತಾರೆ. 'ಶರಣರ ಗುಣವನ್ನು ಮರಣದಲ್ಲಿ ನೋಡು' ಎಂಬ ಲೋಕೋಕ್ತಿಗೆ ಪಾತ್ರರಾಗಿದ್ದಾರೆ.

## ಯಲ್ಲೂರು ನರಸಿಂಹಯ್ಯ

ಚಿಕ್ಕಬಳ್ಳಾಪುರದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಗಮನಿಸಬೇಕಾದ ಮತ್ತೊಬ್ಬರೆಂದರೆ ಯಲ್ಲೂರು ನರಸಿಂಹಯ್ಯ. ಇವರು ೧೯೧೯ರಲ್ಲಿ ಜನಿಸಿ, ತಮ್ಮ ಹದಿನೆಂಟನೇ ವಯಸ್ಸಿನ ವೇಳೆಗೆ ಚಿಕ್ಕಬಳ್ಳಾಪುರದಲ್ಲಿ ಕಾಂಗ್ರೆಸ್ ಸದಸ್ಯರಾಗಿ ಸೇರಿ ಚಟುವಟಿಕೆಗಳಲ್ಲಿ ಪಾಲ್ಗೊಂಡವರಾಗಿದ್ದಾರೆ. ವ್ಯಾಪಾರ ಮತ್ತು ವ್ಯವಸಾಯ ಇವರ ಜೀವನ ನಿರ್ವಹಣೆಯ ಮಾರ್ಗಗಳಾಗಿದ್ದವು. ಮದ್ದೂರಿನಲ್ಲಿ ನಡೆದ ೧೯೩೮ರ ಧ್ವಜಸತ್ಯಾಗ್ರಹದಲ್ಲಿ ಕೆ.ಸಂಪಂಗಿರಾಮಯ್ಯನವರೊಂದಿಗೆ ಇವರು ಪಾಲ್ಗೊಂಡಂತೆ ತಿಳಿದುಬರುತ್ತದೆ. ಇದು ಇವರಿಗೆ ಚಳುವಳಿಯಲ್ಲಿ ಇದ್ದಂತಹ ಆಸಕ್ತಿಗೆ ನಿದರ್ಶನವಾದದ್ದು.

ಬೆಂಗಳೂರು, ಮೈಸೂರುಗಳಲ್ಲಿ ಸಭೆ ಸಮಾರಂಭಗಳನ್ನು ನಡೆಸಲು ಪ್ರತಿಬಂಧ ಹೇರಿದ ಸಂದರ್ಭದಲ್ಲಿ ನರಸಿಂಹಯ್ಯನವರು ತಮ್ಮ ಊರಿನ ನಾಲ್ವರು ಮಿತ್ರರ ಗುಂಪಿನೊಂದಿಗೆ ಹೋಗುತ್ತಾರೆ. ಮೈಸೂರಲ್ಲಿ ರಂಗಾಚಾರ್ಲು ಪುರಭವನ ಮೈದಾನದಲ್ಲಿ ಪ್ರತಿಬಂಧಕಾಜ್ಞೆಯನ್ನು ಮುರಿಯಲು ಹೋದ ಸಂದರ್ಭದಲ್ಲಿ ಬಂಧನಕ್ಕೆ ಒಳಗಾಗುತ್ತಾರೆ. ಇವರಿಗೆ ಒಂದು ವರ್ಷ ಕಾರಾಗೃಹ ಶಿಕ್ಷೆ ಮತ್ತು ೨೦೦ ರೂ. ದಂಡವನ್ನು ವಿಧಿಸಲಾಗುತ್ತದೆ. ಜುಲ್ಮಾನೆ ಕೊಡದಿದ್ದರೆ ಇನ್ನೂ ಎರಡು ತಿಂಗಳು ಶಿಕ್ಷೆಗೆ ಪಾತ್ರರಾಗಬೇಕೆಂದು ತೀರ್ಪು ನೀಡಲಾಗುತ್ತದೆ. ಇದರಿಂದಾಗಿ ನರಸಿಂಹಯ್ಯ ಅವರು ಜೈಲುವಾಸವನ್ನು ಅನುಭವಿಸಬೇಕಾಗುತ್ತದೆ.

ಮೈಸೂರು ಜೈಲಿನಲ್ಲಿ ಸಂಸ್ಥಾನದ ಕಾಂಗ್ರೆಸ್‌ನವರಾದ ಅನೇಕ

ಕಾರ್ಯಕರ್ತರ ಸ್ನೇಹವೂ ಇವರಿಗೆ ದೊರೆಯುತ್ತದೆ. ಇವರಲ್ಲಿ ಟಿ.ರಾಮಾಚಾರ್, ಕೆ.ಪಟ್ಟಾಭಿರಾಮನ್, ಹೆಚ್.ಸಿದ್ದಪ್ಪ, ಸಾಹುಕಾರ್ ಚೆನ್ನಯ್ಯ, ಹೆಚ್.ಸಿದ್ದಯ್ಯ, ಮುನಿಯಪ್ಪ ಮುಂತಾದವರೆಲ್ಲ ಇರುತ್ತಾರೆ. ಇವರೆಲ್ಲರೂ ಒಬ್ಬೊಬ್ಬರಾಗಿ ಬಿಡುಗಡೆ ಆಗಿಹೋದ ನಂತರ ಇವರು ಮತ್ತು ಮಂಡ್ಯದ ಮಹಾಬಲರಾಯರು ಮಾತ್ರವೇ ಜೈಲಿನಲ್ಲಿ ಉಳಿಯಬೇಕಾಗುತ್ತದೆ. ಕಡೆಯತನಕವೂ ಇವರಿಬ್ಬರೂ ಒಟ್ಟಿಗೇ ಇರಬೇಕಾಗುತ್ತದೆ. ನರಸಿಂಹಯ್ಯನವರೂ ಸಹ ಜಯಚಾಮರಾಜೇಂದ್ರ ಒಡೆಯರ ಪಟ್ಟಾಭಿಷೇಕದ ಹೊತ್ತಿಗೆ ಬಿಡುಗಡೆ ಹೊಂದಿ ಹೊರಬರುತ್ತಾರೆ. ಕಡೆಯವರೆಗೂ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತರಾಗಿಯೇ ಇರುತ್ತಾರೆ.

## ಕೆ.ಸಂಪಂಗಿರಾಮಯ್ಯ

ಚಿಕ್ಕಬಳ್ಳಾಪುರದ ಸೀತಾರಾಮಯ್ಯ ರಂಗಮ್ಮ ಇವರ ಮಗನಾಗಿ ೧೯೦೨ರಲ್ಲಿ ಕೆ. ಸಂಪಂಗಿರಾಮಯ್ಯನವರು ಜನ್ಮತಳೆದಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ತಮ್ಮ ಪ್ರೌಢ ಶಿಕ್ಷಣವನ್ನು ಮುಗಿಸಿ ಬೆಂಗಳೂರಿಗೆ ತೆರಳಿ ಅಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿ ಹೊಂದುತ್ತಾರೆ. ಅನಂತರದಲ್ಲಿ ಕಾನೂನು ಪದವಿಗಾಗಿ ಹಾತೊರೆದು ಮದ್ರಾಸ್ ಲಾ ಕಾಲೇಜಿನಿಂದ ೧೯೨೪ರಲ್ಲಿ ಬಿ.ಎಲ್. ಪದವಿ ಗಳಿಸುತ್ತಾರೆ. ನಮ್ಮ ರಾಜ್ಯದಿಂದ ಹೊರರಾಜ್ಯಕ್ಕೆ ಹೋಗಿ ಪದವಿ ಗಳಿಸಿದ್ದು ಇವರ ವಿದ್ಯಾರ್ಜನೆಯ ಬಗೆಗಿನ ಹಂಬಲ ಮತ್ತು ಉತ್ಸುಕತೆಗಳು ಇದರಿಂದಾಗಿ ನಮಗೆ ಮನದಟ್ಟಾಗುತ್ತದೆ.

ಕಾನೂನು ಪದವಿಯ ನಂತರ ಸುಪ್ರಸಿದ್ಧ ವಕೀಲರಾಗಿದ್ದ ಶಾಮಯ್ಯಂಗಾರರ ಬಳಿ ವಕೀಲಿ ವೃತ್ತಿಯನ್ನು ಆರಂಭಿಸುತ್ತಾರೆ. ಇವರಿಗೆ ವಿದ್ಯಾರ್ಥಿದೆಸೆಯಿಂದಲೇ ರಾಜಕೀಯದಲ್ಲಿ ಆಸಕ್ತಿಯಿದ್ದ ಪರಿಣಾಮದಿಂದಾಗಿ ಅಂದಿಗೆ ತಗಡೂರು ರಾಮಚಂದ್ರರಾವ್, ವೀರಕೇಸರಿ ಸೀತಾರಾಮಶಾಸ್ತ್ರಿ, ಕೆ.ಟಿ.ಭಾಷ್ಯಂ, ಕೆ.ಸಿ.ರೆಡ್ಡಿ, ಹೆಚ್.ಕೆ.ವೀರಣ್ಣಗೌಡ, ಹೆಚ್.ಸಿ.ದಾಸಪ್ಪ, ಟಿ.ಸಿದ್ಧಲಿಂಗಯ್ಯ ಮೊದಲಾದವರ ಸಂಪರ್ಕ ಪಡೆಯಲು ಸಾಧ್ಯವಾಗುತ್ತದೆ. ಚಿಕ್ಕಬಳ್ಳಾಪುರದಲ್ಲಿ ಪ್ರಥಮ ಬಾರಿಗೆ ಎಂದರೆ ಟಿಸಿಸಿ ಸ್ಥಾಪನೆಯಾದ ೧೯೨೮ರಲ್ಲಿ ಅದರ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಇದು ಇವರ ಮುತ್ಸದ್ದಿತನಕ್ಕೆ ನಿದರ್ಶನವಾಗಿದೆ.

ಸಂಪಂಗಿರಾಮಯ್ಯನವರು ಸ್ವಾತಂತ್ರ್ಯ ಚಳುವಳಿಯ ಮುಖ್ಯಭಾಗವಾದ ಕರ್ನಾಟಕ ಶಿವಪುರ ಕಾಂಗ್ರೆಸ್‌ನಲ್ಲಿ ಭಾಗವಹಿಸುತ್ತಾರೆ. ಕೆ.ಟಿ.ಭಾಷ್ಯಂ ಅವರೊಡನೆ ಎರಡನೇ ತಂಡದಲ್ಲಿ ಸೆರೆಮನೆಗೆ ಹೋಗುತ್ತಾರೆ. ಶಿವಪುರದ ಧ್ವಜ ಸತ್ಯಾಗ್ರಹದ ನಂತರದಲ್ಲಿಯೇ ನಡೆದ ವಿದುರಾಶ್ವತ್ಥ ಹತ್ಯಾಕಾಂಡದ ನಂತರದಲ್ಲಿ ಅದರ ತನಿಖೆಗೆ ನೇಮಕವಾದ ರಮೇಶಂ ಸಮಿತಿಯ ಮುಂದೆ ಆಧಾರಪೂರ್ವಕ ಮಾಹಿತಿಯನ್ನು ಒದಗಿಸುತ್ತಾರೆ. ಇದು ಇವರ ಸತ್ಯಪ್ರತಿಪಾದನಾ ಸಾಮರ್ಥ್ಯ, ನಿರ್ಭಯತೆಗಳನ್ನು ವ್ಯಕ್ತಪಡಿಸುವಂತಿದೆ. ಇದರೊಂದಿಗೆ ಇದು ಅವರ ವಕೀಲಿಕೆಯಲ್ಲಿ ಅವರು ಹೊಂದಿದ್ದಂತಹ ಪ್ರತಿಭೆಯನ್ನು ಸಹ ದರ್ಶಿಸುವಂತಿದೆ.

ಸಂಪಂಗಿರಾಮಯ್ಯನವರು ಮೈಸೂರು ಕಾಂಗ್ರೆಸ್ ಸಮಿತಿಯ ಸದಸ್ಯರಾಗಿಯೂ ಆಯ್ಕೆಗೊಳ್ಳುತ್ತಾರೆ. ಇವರು ಕೆಜಿಎಫ್‌ನಲ್ಲಿ ಇತರ ಕಾರ್ಯಸಮಿತಿ ಸದಸ್ಯರೊಡನೆ ಬಂಧನಕ್ಕೊಳಗಾಗಿ ಕಠಿಣ ಸೆರೆಮನೆ ವಾಸ ಅನುಭವಿಸಬೇಕಾಗುತ್ತದೆ. ಶಿಕ್ಷೆ ಅನುಭವಿಸಿ ಹೊರಬಂದನಂತರ ಇನ್ನಿತರ ಐವರೊಡನೆ ಇವರ ವಕೀಲಿ ಸನ್ನದನ್ನು ಆರು ವರ್ಷ ರದ್ದುಮಾಡುತ್ತಾರೆ. ಇದರಿಂದ ಅವರ ಜೀವನ ನಿರ್ವಹಣೆ ಸಂಪಾದನೆಗೂ ದೊಡ್ಡಪೆಟ್ಟು ಬೀಳುತ್ತದೆ. ಇದರಿಂದಾಗಿ ಅನೇಕ ಕಷ್ಟಕಾರ್ಪಣ್ಯಗಳಿಗೆ ಸಂಪಂಗಿರಾಮಯ್ಯನವರು ಒಳಗಾದರೂ ಇದರಿಂದ ಅವರು ಎದೆಗುಂದಲಿಲ್ಲ. ಅನಂತರದಲ್ಲಿ ಸಂಸ್ಥಾನ ಕಾಂಗ್ರೆಸ್ ಪ್ರಚಾರಕರಾಗಿ ಹಾಗೂ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಾರೆ.

ಗಾಂಧೀಜಿಯವರು ಕರೆಕೊಟ್ಟ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ಆರಂಭಕಾಲಕ್ಕೆ ಬ್ರಿಟಿಷ್ ಸರ್ಕಾರವು ಇವರನ್ನು ಬಂಧಿಸುತ್ತದೆ. ಬೆಂಗಳೂರು, ಹಾಸನ, ಶಿವಮೊಗ್ಗ, ಸಾಗರ ಮುಂತಾದ ಕಡೆಗಳಲ್ಲಿ ಕಾರಾಗೃಹವಾಸವನ್ನು ಅನುಭವಿಸಿ ಬಿಡುಗಡೆಯಾದ ಸ್ವಲ್ಪ ಸಮಯಕ್ಕೆ ಸರಿಯಾಗಿ ಇವರ ಪತ್ನಿ ವೆಂಕಟಲಕ್ಷ್ಮಮ್ಮನವರು ದೈವಾಧೀನರಾಗುತ್ತಾರೆ. ಇದರಿಂದಾಗಿ ಇವರಿಗೆ ಅಪಾರ ಹಾನಿಯಾದಂತಾಗುತ್ತದೆ. ಸಂಪಂಗಿರಾಮಯ್ಯನವರು ಚಿಕ್ಕಬಳ್ಳಾಪುರ ಪುರಸಭೆ ಸದಸ್ಯರಾಗಿಯೂ, ರೆಡ್‌ಕ್ರಾಸ್ ಸಂಸ್ಥೆಯ ಸದಸ್ಯತ್ವ ಹೊಂದಿದ್ದವರಾಗಿ ಇದ್ದುದನ್ನು ಮನಗಾಣಬಹುದಾಗಿದೆ. ಇವರು ಕರ್ನಾಟಕ ಏಕೀಕರಣ ಚಳುವಳಿಯನ್ನು ಪ್ರಬಲವಾಗಿ ಸಮರ್ಥಿಸಿದವರಾಗಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ಬಂದು ಜವಾಬ್ದಾರಿ ಸರ್ಕಾರ ಸ್ಥಾಪನೆಯಾದ ನಂತರ ಇವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡುತ್ತಾರೆ. ಇವರು ಹಿಂದೂ ಕಾನೂನಿನಲ್ಲಿ ಅಧಿಕೃತವಾದ ಪಾಂಡಿತ್ಯ ಜ್ಞಾನವನ್ನು ಹೊಂದಿದ್ದರು ಜೊತೆಗೆ ಹಾಸ್ಯಪ್ರಿಯರೂ ಹೌದು. ವಾದ ವಿವಾದದಲ್ಲಿ ತೀವ್ರವಾದ ಬಿಸಿ ಉಂಟಾದಾಗ ಹಾಸ್ಯಚಟಾಕಿಯನ್ನು ಹಾರಿಸುತ್ತಿದ್ದರಂತೆ. ಪ್ರತಿ ಭಾನುವಾರ ಚಿಕ್ಕಬಳ್ಳಾಪುರದಲ್ಲಿ

ನಡೆಯುತ್ತಿದ್ದ ವ್ಯಾಸಂಗಗೋಷ್ಠಿಯಲ್ಲಿ 'ರಿಪಬ್ಲಿಕ್' ಕುರಿತು ಇವರು ವಿಶ್ವದ ಇತಿಹಾಸದ ಪುಟಗಳಿಂದ ಆರಿಸಿದ ವ್ಯಾಖ್ಯಾನಗಳನ್ನು ನೀಡುವಂತಹ ಸಾಮರ್ಥ್ಯ ಹೊಂದಿದ್ದವರೆಂದು ತಿಳಿದುಬರುತ್ತದೆ. ಅದೊಂದು ವಿಧವಾದ ಗಂಟಲು ಬೇನೆಗೆ ಒಳಗಾದ ಸಂಪಂಗಿರಾಮಯ್ಯನವರು ದಿನಾಂಕ ೧೨-೦೯-೧೯೫೭ರಲ್ಲಿ ದಿವಂಗತರಾಗುತ್ತಾರೆ. ಬೆಂಗಳೂರಿನ ಗಾಂಧೀಭವನದಲ್ಲಿ ಇವರ ಭಾವಚಿತ್ರವನ್ನು ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಅವರು ೧೯೬೭ರಲ್ಲಿ ಅನಾವರಣ ಮಾಡಿದುದು ಇವರು ಗಳಿಸಿದ್ದ ಕೀರ್ತಿ ಪ್ರಸಿದ್ಧಿಗಳಿಗೆ ನಿದರ್ಶನವೆನ್ನಬಹುದು.

## ಸಿ.ಕೆ. ನಾಗರಾಜರಾವ್

ಭಾರತದ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಂಡವರಿದ್ದಂತೆ ಪರೋಕ್ಷವಾಗಿ ಇಂತಹದೊಂದು ಘನಕಾರ್ಯಗಳಲ್ಲಿ ಭಾಗಿಗಳಾದವರೂ ಇದ್ದಾರೆ. ಸಾಂಸ್ಕೃತಿಕ ಬದುಕಿಗೆ ತಮ್ಮನ್ನು ಒಪ್ಪಿಸಿಕೊಂಡು ಹರಿಕಥೆ, ಲಾವಣಿ, ನಾಟಕಗಳನ್ನು ನಡೆಸಿಕೊಂಡು ಬಂದ ಕಲಾವಿದರಂತೆ ಭೂಗತವಾಗಿ ಕರಪತ್ರ, ಪತ್ರಿಕೆಗಳನ್ನು ಹಸ್ತಪ್ರತಿ ಮೂಲಕ, ಕಲ್ಲಚ್ಚು ಪ್ರತಿಗಳ ಮೂಲಕ ಗೌಪ್ಯವಾಗಿ ರವಾನಿಸಿ ದೇಶಭಕ್ತ ಜನರಲ್ಲಿ ಸಂಗ್ರಾಮದ ವರದಿಗಳ ಮೂಲಕ ದೇಶಾಭಿಮಾನಕ್ಕೆ ಕಾರಣರಾದವರಿದ್ದಾರೆ.

ಕನ್ನಡದ ಸುಪ್ರಸಿದ್ಧ ಬರಹಗಾರರಾಗಿ, ಪತ್ರಿಕೋದ್ಯಮಿ, ನಾಟಕ, ಚಲನಚಿತ್ರಗಳ ನಿರ್ದೇಶಕರೂ ಆಗಿದ್ದ ಡಾ.ಸಿ.ಕೆ.ನಾಗರಾಜರಾಯರು ಚಿಕ್ಕಬಳ್ಳಾಪುರದಲ್ಲಿ ಪ್ರೌಢಶಾಲೆ ವಿದ್ಯಾರ್ಥಿಯಾಗಿದ್ದಾಗಲೇ ಅವರನ್ನು ಸ್ವಾತಂತ್ರ್ಯ ಚಳುವಳಿ ಬಲವಾಗಿ ಸೆಳೆಯುತ್ತದೆ. ಆದರೆ ನೇರವಾಗಿ ಚಳುವಳಿಯಲ್ಲಿ ಭಾಗವಹಿಸಲಿಲ್ಲವಾದರೂ ಪರಿಣಾಮಕಾರಿಯಾದ ಕಾರ್ಯವನ್ನು ಮಾಡಿರುತ್ತಾರೆ. ಇವರಿಗೆ ಮಹಾತ್ಮ ಗಾಂಧೀಜಿಯವರ ಸಂಪರ್ಕವು ಅವರು ನಂದಿ ಗಿರಿಧಾಮಕ್ಕೆ ವಿಶ್ರಾಂತಿಗಾಗಿ ಬಂದ ಸಂದರ್ಭದಲ್ಲಿ ಲಭ್ಯವಾಗುತ್ತದೆ. ಸ್ಕೌಟ್ ಸ್ವಯಂಸೇವಕರಾಗಿದ್ದ ಇವರು ತಮ್ಮ ಸಹಪಾಠಿಗಳೊಂದಿಗೆ ನಂದಿಗೆ ಹೋಗಿ ಅಲ್ಲಿ ಗಾಂಧೀಜಿಯವರ ಸೇವೆಯಲ್ಲಿ ನಿರತರಾಗಿ ಅವರ ಪ್ರಭಾವ-ಪ್ರೇರಣೆಗಳಿಗೆ ಒಳಗಾಗಿ ಖಾದಿವ್ರತವನ್ನು ಹಿಡಿಯುತ್ತಾರೆ.

ಸಿ.ಕೆ.ನಾಗರಾಜರಾವ್ ಅವರು ತಮ್ಮ ಹದಿನೈದನೇ ವಯಸ್ಸಿನಲ್ಲಿಯೇ ಬೆಂಗಳೂರಿಗೆ ಬಂದು ನೆಲೆಸುತ್ತಾರೆ. ಇಲ್ಲಿ ಇವರ ಸೋದರಮಾವಂದಿರಾದ ನಿಟ್ಟೂರು ಶ್ರೀನಿವಾಸರಾಯರ ಮಾರ್ಗದರ್ಶನವೂ ಲಭ್ಯವಾಗುತ್ತದೆ. ಇವರ



ಕಾರ್ಯಗಳೆಂದರೆ ಚಳುವಳಿಗಾಗಿ ಹಣ ಶೇಖರಣೆ ಮಾಡುವುದು, ಚಳುವಳಿ ಸಂಬಂಧವಾದ ಸೂಚನೆಗಳನ್ನು ನೀಡುವ ಪಾತ್ರಗಳನ್ನು ವಿತರಿಸುವುದು, ಪೊಲೀಸರಿಗೆ ಬೇಕಾದ ನಾಯಕರನ್ನು ಅವರಿಗೆ ಸಿಗದಂತೆ ಸ್ಥಳಾಂತರಿಸುವುದು ಮುಂತಾದ್ದವಾಗಿರುತ್ತದೆ. ಮಾಜಿ ವಿದ್ಯಾಮಂತ್ರಿಗಳಾದ ಎ.ಜಿ.ರಾಮಚಂದ್ರರಾಯರನ್ನು ತಮ್ಮ ಮನೆಯಲ್ಲಿ ಅಡಗಿಸಿಟ್ಟುಕೊಂಡಿದ್ದ ಸಂದರ್ಭವೊಂದು ಇವರ ಚಳುವಳಿಯ ಚಟುವಟಿಕೆಯಲ್ಲಿ ಪ್ರಮುಖವಾದದ್ದಾಗಿದೆ. ಇದರಿಂದ ಇವರ ಕಾರ್ಯಕ್ಷಮತೆ, ಕುಶಲತೆಗಳು ಎದ್ದುಕಾಣುತ್ತವೆ.

ಭಾರತ ದೇಶದಲ್ಲಿ ವಿಧಿಸಲಾಗಿದ್ದ ೧೯೭೫ರ ತುರ್ತುಪರಿಸ್ಥಿತಿಯಲ್ಲಿ ನಡೆದ ಭೂಗತ ಚಟುವಟಿಕೆಗಳನ್ನು ಹೋಲುವಂತಿರುವ ಇವರ ಕಾರ್ಯಸಾಧನೆಗಳಿಂದ ಇವರಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿದ್ದ ತೀವ್ರವಾದ ಹಂಬಲವನ್ನು ಕಾಣಬಹುದಾಗಿದೆ. ಚಿಕ್ಕಬಳ್ಳಾಪುರದ ವಾತಾವರಣ ಮತ್ತು ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧೀಜಿಯವರ ಸೇವೆಯ ಭಾಗ್ಯದಿಂದ ರೂಪಿತಗೊಂಡ ರಾಯರ ಜೀವನದ ಹಿನ್ನೆಲೆಯು ಮಹತ್ತರವಾದದ್ದನ್ನು ಸಾಧಿಸಬೇಕೆಂಬ ಯಾರಿಗಾದರೂ ಮಾರ್ಗದರ್ಶನವಾಗಿ ಉಳಿಯ ಬಲ್ಲದಾಗಿದೆ.

## ಬಾಗೇಪಲ್ಲಿಯ ಕೃಷ್ಣಮಾಚಾರಿ ಎನ್.ವಿ.

ಆಂಧ್ರ ಕರ್ನಾಟಕಗಳ ಗಡಿಭಾಗದಲ್ಲಿ ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೇರಿದ ತಾಲ್ಲೂಕುಗಳಲ್ಲಿ ಮುಳಬಾಗಿಲು, ಬಾಗೇಪಲ್ಲಿಗಳು ಗಮನಾರ್ಹವಾಗಿವೆ. ಇವೆರಡೂ ತಾಲ್ಲೂಕುಗಳೂ ಸಹ ವಿಜಯನಗರದ ಅರಸರ ಆಳ್ವಿಕೆಯ ಕಾಲಕ್ಕೆ ವೈಭವಯುತವಾಗಿ ಬಾಳಿದವೆಂದು ಹೇಳಬಹುದು. ಇವೆರಡರಲ್ಲಿ ಇಂದಿಗೂ ನಮಗೆ ತೆಲುಗು ಭಾಷೆ ಸಂಸ್ಕೃತಿಗಳ ದಟ್ಟವಾದ ಛಾಯೆಯನ್ನು ಉಳಿಸಿಕೊಂಡಂತೆ ಕಂಡುಬರುತ್ತಿರುವ ಬಾಗೇಪಲ್ಲಿಯು ಸ್ವಾತಂತ್ರ್ಯ ಚಳುವಳಿಗೂ ಕಾಣಿಕೆ ಕೊಟ್ಟಿದೆ. ಬಾಗೇಪಲ್ಲಿ ತಾಲ್ಲೂಕಿನ ನೀರಗಂಟಿಪಲ್ಲಿ ಗ್ರಾಮಕ್ಕೆ ಸೇರಿದವರಾದ ಎನ್.ವಿ.ಕೃಷ್ಣಮಾಚಾರಿ ಅವರು ತಮ್ಮ ಹಳ್ಳಿಯಲ್ಲಿ ಅನುಕೂಲವಿಲ್ಲದಿದ್ದ ಕಾರಣದಿಂದ ತಮಗೆ ಸಮೀಪವಾಗಿದ್ದ ಚಿಂತಾಮಣಿ ಪೌಢಶಾಲೆಯ ವಿದ್ಯಾರ್ಥಿಯಾಗಿರುತ್ತಾರೆ. ಅಂತಹ ಸಂದರ್ಭದಲ್ಲಿ ವಿದೇಶಿ ಬಹಿಷ್ಕಾರ ಚಳುವಳಿ ಇವರನ್ನು ಆಕರ್ಷಿಸುತ್ತದೆ. ಖಾದಿ ಧರಿಸಿ ಶಾಲೆಯನ್ನು ಬಿಡುತ್ತಾರೆ. ಅದಾಗಲೇ ಚಿಂತಾಮಣಿಯಲ್ಲಿ ಶ್ರೀನಿವಾಸಗುಪ್ತ ಮತ್ತು ರಾಮಶೇಷ ಶಾಸ್ತ್ರಿ ಎಂಬುವವರು ಚಳುವಳಿಯಲ್ಲಿ ಪ್ರಮುಖರಾಗಿರುತ್ತಾರೆ.

ಅನಂತರದಲ್ಲಿ ಕೃಷ್ಣಮಾಚಾರಿ ಅವರ ತಂದೆಯವರು ಮಗನ ಮೇಲಿನ ಅಕ್ಕರೆಯಿಂದ ಇವರನ್ನು ಬಾಗೇಪಲ್ಲಿಯ ಶಾಲೆಗೆ ದಾಖಲು ಮಾಡುತ್ತಾರೆ. ಮುಂಬಯಿ ಮೇಯರ್ ಆಗಿದ್ದ ನಾರಿಮನ್ ಅವರನ್ನು ಅವರ ಚಳುವಳಿ ಸಂಬಂಧವಾದ ಭಾಷಣದ ಆರೋಪದ ಮೇಲೆ ಬೆಂಗಳೂರಿನಲ್ಲಿ ಬಂಧಿಸಲಾಗುತ್ತದೆ. ಸುದ್ದಿಯನ್ನು ತಿಳಿದ ವಿದ್ಯಾರ್ಥಿಗಳಲ್ಲಿ ತಾವು ಸಹ ದೇಶದ ಸ್ವಾತಂತ್ರ್ಯ ಚಳುವಳಿಯಂತಹ ಪವಿತ್ರ ಕಾರ್ಯಕ್ಕಿಳಿಯಬೇಕೆಂಬ ಸಂಕಲ್ಪವುಂಟಾಗುತ್ತದೆ. ನಾರಿಮನ್ ಅವರ ಬೆಂಗಳೂರಿನ ಭಾಷಣ ಹಾಗೂ ಅವರ ಬಂಧನಗಳು ರಾಜ್ಯದಲ್ಲೆಲ್ಲಾ ವಿಶೇಷ ಪರಿಣಾಮಗಳನ್ನು ಬೀರಿರುತ್ತವೆ. ಕೃಷ್ಣಮಾಚಾರಿ ಅವರು ಸಹಾ ಕಾಂಗ್ರೆಸ್ ಸೇರಲು ನಿರ್ಧರಿಸುತ್ತಾರೆ. ಬಾಗೇಪಲ್ಲಿಯು ಅಂದಿನ ಕಾಲದಲ್ಲಿ ಹಿಂದೂಪುರದೊಂದಿಗೆ ಹೆಚ್ಚಿಗೆ ಸಂಪರ್ಕ ಹೊಂದಿದ್ದ ಸ್ಥಳವಾಗಿದ್ದು, ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದಾಗಿತ್ತು. ಇಲ್ಲಿಂದ ಅನೇಕ ಚಟುವಟಿಕೆಗಳು ನಡೆದಿದ್ದವು. ರಾಜಕೀಯ ಚಟುವಟಿಕೆಗಳ ಸಂಬಂಧವಾದ ತರಬೇತಿಗೆ ಹಿಂದೂಪುರವು ಕೇಂದ್ರವಾಗಿತ್ತು. ಇಲ್ಲಿ ಇವರೊಂದಿಗೆ ಅಪ್ಪೇಪಲ್ಲಿಯ ಅಪ್ಪಸ್ವಾಮಿರೆಡ್ಡಿ, ಪಾತಪಾಳ್ಯದ ಸುಬ್ಬರಾಯಶೆಟ್ಟಿ, ವೆಂಕಟರಾಯಪ್ಪನವರುಗಳು ಭಾಗವಹಿಸುತ್ತಾರೆ. ತರಬೇತಿಯ ಸಮಯದಲ್ಲಿ ಕಲ್ಲೂರು ಸುಬ್ಬರಾವ್, ನಮ್ಮ ದೇಶದ ರಾಷ್ಟ್ರಪತಿಗಳೂ ಆಗಿದ್ದ ವಿ.ವಿ.ಗಿರಿ ಅಂತಹಾ ಮಹಾನ್ ನಾಯಕರ ಸಂಪರ್ಕವೂ ಇವರಿಗೆ ಲಭಿಸುತ್ತದೆ.

ಬಾಗೇಪಲ್ಲಿ ಸಮೀಪದಲ್ಲಿರುವ ಸುಪ್ರಸಿದ್ಧವಾದ ಪುಣ್ಯಕ್ಷೇತ್ರವೇ ಕದಿರಿ. ಇದು ಸ್ವಾತಂತ್ರ್ಯ ಚಳುವಳಿಯ ನೇತಾರರಿಗೂ ಆಶ್ರಯವಾಗಿತ್ತೆಂಬುದಕ್ಕೆ ಇಲ್ಲಿ ನಡೆದ ಸತ್ಯಾಗ್ರಹದಲ್ಲಿ ಕೃಷ್ಣಮಾಚಾರಿ ಅವರು ಸುಪ್ರಸಿದ್ಧ ಹೆಸರು ಪಡೆದಿದ್ದ ಸೂರ್ಯನಾರಾಯಣ ಜೋಷಿ ಎಂಬುವವರೊಂದಿಗೆ ಪಾಲ್ಗೊಂಡಿರುತ್ತಾರೆ ಹಾಗೂ ಬಂಧನಕ್ಕೂ ಒಳಗಾಗುತ್ತಾರೆ. ಬಂಧನದ ದಿನದಂದೇ ಬಿಡುಗಡೆಯಾಗಿದ್ದ ವಿಚಾರವು ಇವರ 'ಆತ್ಮಕಥನ'ದಿಂದ ತಿಳಿದುಬಂದಿದೆ.

ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹವು ಕೋಲಾರ ಜಿಲ್ಲೆಯ ವಿದುರಾಶ್ವತ್ಥ ಹತ್ಯಾಕಾಂಡಕ್ಕೆ ಮುನ್ನ ನಡೆದಿದ್ದನ್ನು ನಾವೆಲ್ಲರೂ ಬಲ್ಲವರಾಗಿರುತ್ತೇವೆ. ಶಿವಪುರ ಸತ್ಯಾಗ್ರಹದಲ್ಲಿ ಕೃಷ್ಣಮಾಚಾರಿ ಅವರು ಸಹ ಪಾಲ್ಗೊಳ್ಳುತ್ತಾರೆ. ಅಲ್ಲಿಂದ ವಾಪಸ್ಸಾದ ಮೇಲೆ ಪಾಳ್ಯಕೆರೆ ಗ್ರಾಮದಲ್ಲಿ ನಡೆದ ಧ್ವಜ ಸತ್ಯಾಗ್ರಹಕ್ಕೆ ರಾಮರೆಡ್ಡಿ ಅವರು ಮುಂದಾಳಾಗಿರುತ್ತಾರೆ. ಇದರೊಂದಿಗೆ ಎ.ಸುಬ್ಬರಾಮಶೆಟ್ಟಿ, ಅಪ್ಪಸ್ವಾಮಿರೆಡ್ಡಿ, ಪಿ.ರಾಮಯ್ಯಶೆಟ್ಟಿ, ಎ.ರತ್ನಯ್ಯಶೆಟ್ಟಿ ಇವರಲ್ಲದೆ ಇವರ ತಮ್ಮ ನಾಗಭೂಷಣಾಚಾರಿ



ಇವರೂ ಸಹ ಭಾಗವಹಿಸಿದ್ದರು. ಕೃಷ್ಣಮಾಚಾರಿ ಅವರು ಸತ್ಯಾಗ್ರಹದ ಕಾರಣದಿಂದ ಬಾಗೇಪಲ್ಲಿ ಲಾಕಪ್ಪಿನಲ್ಲಿ ಶಿಕ್ಷೆ ಅನುಭವಿಸಿದವರಾಗಿದ್ದಾರೆ. ಇವರು ರಾಬರ್ಟ್‌ಸನ್‌ಪೇಟೆ ಜೈಲಿನಲ್ಲಿ ಸಹ ೨೭ ದಿನಗಳ ಕಾಲ ಶಿಕ್ಷೆ ಅನುಭವಿಸಿರುತಾರೆ. ಇದಕ್ಕೆ ಕಾರಣವೆಂದರೆ ಮೈಸೂರಿನಲ್ಲಿ ನಡೆದ ಹ್ಯಾಮಿಲ್ಟನ್ ಬಿಲ್ಡಿಂಗ್ ಕಟ್ಟಡದ ಚಳುವಳಿಯೆ ಆಗಿದೆ. ಕೆ.ಜಿ.ಎಫ್.ನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಅನೇಕರು ಅದೇ ದಿನ ಬಿಡುಗಡೆ ಹೊಂದಿರುತ್ತಾರೆ.

ಕೃಷ್ಣಮಾಚಾರಿ ಮತ್ತು ಇವರ ತಂಡದವರು ನಡೆಸಿದ ಚಳುವಳಿಗಳು ವಿಶೇಷವಾಗಿ ತಾಲ್ಲೂಕು ಮಟ್ಟದಲ್ಲಿ ನಡೆದದ್ದಾಗಿವೆ. ಗ್ರಾಮಗಳಲ್ಲಿನ ಜನತೆಯಲ್ಲಿ ಸ್ವರಾಜ್ಯದ ಪ್ರೇಮವನ್ನುಂಟುಮಾಡುವ ವಿಚಾರಕ್ಕೆ ಇವು ಉದಾಹರಣೆಗಳೆನ್ನಬಹುದು. ಇದರಲ್ಲಿ ವಿಶೇಷವಾಗಿ ಪಾತಪಾಳ್ಯ, ಕೃಷ್ಣಮಾಚಾರಿ ಅವರ ಹುಟ್ಟೂರಾದ ನೀರಗಂಟಿಪಲ್ಲಿ, ಮಿಟ್ಟೇಮರಿ, ಆಚೆಪಲ್ಲಿ, ಚೇಳೂರು, ಗೂಳೂರುಗಳು ಪ್ರಮುಖವಾದ ಸ್ಥಾನದಲ್ಲಿವೆ. ಮಿಟ್ಟೇಮರಿ, ಗೂಳೂರುಗಳು ಇಂದಿಗೂ ಸುಪ್ರಸಿದ್ಧ ಸ್ಥಳಗಳಾಗಿವೆ. ಗೂಳೂರು ಒಂದು ಸಂಸ್ಥಾನವಾಗಿಯೇ ಪ್ರಸಿದ್ಧವಾಗಿ ವೀರಶೈವ ಧರ್ಮದ ಕೇಂದ್ರವೆನ್ನಬಹುದಾಗಿದೆ. ಇಲ್ಲೆಲ್ಲಾ ಹೆಂಡದಂಗಡಿ, ಪಿಕೆಟಿಂಗ್, ಸ್ವದೇಶಿ ಪ್ರಚಾರಗಳು ನಡೆದದ್ದಾಗಿ, ಗೂಳೂರು ಗ್ರಾಮದಲ್ಲಿ ಚರಕಾ ಪ್ರಚಾರ ಕೇಂದ್ರವೂ ಆರಂಭವಾಗುತ್ತದೆ.

ಕೆಜಿಎಫ್ ಸತ್ಯಾಗ್ರಹದ ಸಂದರ್ಭದಲ್ಲಿ ಇವರು ಬಂಧನಕ್ಕೊಳಗಾಗಿ ೧೫ ದಿನಗಳ ಕಾಲ ಜೈಲಿನಲ್ಲಿರುತ್ತಾರೆ. ಮನೆಗೆ ವಾಪಸ್ ಬಂದವರನ್ನು ತಂದೆಯುವರು ಸೇರಿಸದಿದ್ದಾಗ ಇವರ ಕೆಲವು ಗೆಳೆಯರು ಇವರಿಗೆ ಆಶ್ರಯದಾತರಾಗುತ್ತಾರೆ. ಇವರೊಂದಿಗೆ ಸೇರಿ ಕಾಂಗ್ರೆಸ್ ಚಳುವಳಿಯನ್ನು ಮುಂದುವರಿಸುತ್ತಾರೆ. ಗೂಳೂರಿನಲ್ಲಿ ಕಾರ್ಯನಿರತರಾಗಿದ್ದಾಗ ಇವರ ಚಿಕ್ಕಪ್ಪನವರು ತೀರಿಕೊಂಡಿದ್ದು ಇವರಿಗೆ ದೊಡ್ಡಪೆಟ್ಟು ಬೀಳುತ್ತದೆ. ಕುಲಕಸುಬನ್ನು ಮುಂದುವರಿಸಿಕೊಂಡು ಹಳ್ಳಿಯಲ್ಲಿರುತ್ತಾರೆ.

'ಹುಟ್ಟುಗುಣ ಸುಟ್ಟರೂ ಹೋಗದು' ಎಂಬ ಗಾದೆಯಂತೆ ಇವರ ಮನಸ್ಸು ದಿನದಿಂದ ದಿನಕ್ಕೆ ಹಬ್ಬುತ್ತಿದ್ದ ಚಳುವಳಿಯ ಕಡೆ ಸದಾ ನಿರತವಾಗಿರುತ್ತದೆ. ಇದೇ ಸಮಯದಲ್ಲಿ ಮಹಾತ್ಮ ಗಾಂಧಿಯವರು 'ಭಾರತ ಬಿಟ್ಟು ತೊಲಗಿ' ಚಳುವಳಿಗೆ ಕರೆ ಕೊಟ್ಟದ್ದು ಇವರಲ್ಲಿ ಪ್ರೇರಣೆ ಉಂಟಾಗುತ್ತದೆ. ವಿದೇಶಿ ಚಳುವಳಿ, ಹೆಂಡದಂಗಡಿ ಪಿಕೆಟಿಂಗ್, ಈಚಲುಮರಗಳ ನಾಶ, ಕರಪತ್ರ ಹಂಚುವ ಕಾರ್ಯ, ತಂತಿ ಕತ್ತರಿಸುವುದು ಇವೇ ಮುಂತಾದ ಕೆಲಸಗಳನ್ನು

ಮುಂದುವರಿಸುತ್ತಾರೆ. ಇವರು ಮತ್ತು ಅಪ್ಪಸ್ವಾಮಿರೆಡ್ಡಿ ಚಿಕ್ಕಬಳ್ಳಾಪುರ ಜೈಲಿನಲ್ಲಿ ರಿಮ್ಯಾಂಡ್‌ನಲ್ಲಿಡುತ್ತಾರೆ. ಬೆಂಗಳೂರು ಸೆಂಟ್ರಲ್ ಜೈಲಿಗೆ ಇವರನ್ನು ಸ್ಥಳಾಂತರಿಸುತ್ತಾರೆ. ಒಂದು ವರ್ಷದ ನಂತರ ಬಿಡುಗಡೆಯಾಗಿ ಬಂದಾಗ ಇವರ ಮನೆ ಅಸ್ತವ್ಯಸ್ತವಾಗಿದ್ದ ಕಾರಣ ಅದರಲ್ಲಿ ತೊಡಗಿಕೊಳ್ಳುತ್ತಾರೆ.

ಸ್ವಾತಂತ್ರ್ಯ ಚಳುವಳಿಯು ತಾರಕಕ್ಕೆ ಮುಟ್ಟಿದ ಕಾಲದಲ್ಲಿ ಎಂದರೆ ೧೯೪೨ರಲ್ಲಿ ಅಪ್ಪಸ್ವಾಮಿರೆಡ್ಡಿ ಮತ್ತು ಇವರನ್ನು ಜಿಲ್ಲೆಯಿಂದ ಗಡಿಪಾರು ಮಾಡಿದ ಸಮಯದಲ್ಲಿ ಹಿಂದೂಪುರಕ್ಕೆ ಬಂದು ಸೇರಿಕೊಳ್ಳುತ್ತಾರೆ. 'ಪೌರವಾಣಿ' ಪತ್ರಿಕೆಯ ಸಂಪಾದಕರಾಗಿದ್ದ ಹೆಚ್.ಎಸ್.ದೊರೆಸ್ವಾಮಿ ಅವರ ಸಹಾಯಹಸ್ತ ಒದಗಿ ಬಂದದ್ದಲ್ಲದೆ ಸೇವಾಶ್ರಮದಲ್ಲಿದ್ದ ಲಿಂಗಣ್ಣನವರ ಸಹಾಯಹಸ್ತವೂ ಸಿಗುತ್ತದೆ. ಕದಿರಿ, ಸೋಮಘಟ್ಟ, ಚದುಮು ಗ್ರಾಮಗಳಲ್ಲಿ ಶಿಬಿರಗಳನ್ನು ನಡೆಸಲು ಇನ್ನಿತರರ ನೆರವೂ ಲಭ್ಯವಾಗುತ್ತದೆ.

ಗಡಿಭಾಗದ ಚಟುವಟಿಕೆಗಳಲ್ಲಿ ವಿಶೇಷವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಕೃಷ್ಣಮಾಚಾರಿ ಅವರಿಗೆ ಅಪ್ಪಸ್ವಾಮಿರೆಡ್ಡಿ ಅವರು ವಿಶೇಷ ಜೊತೆಗಾರರಾಗಿರುತ್ತಾರೆ. ಇವರು ಕಡೆಯವರೆಗೆ ಕೋಲಾರ ಜೈಲಿನಿಂದ ಬಿಡುಗಡೆಯಾಗಿ ಬಂದ ಸಮಯಕ್ಕೆ ತಂದೆಯವರು ಸ್ವರ್ಗಸ್ಥರಾಗಿರುತ್ತಾರೆ. ತಮ್ಮ ಸಂಸಾರಕ್ಕೊದಗಿಬಂದ ಕಷ್ಟಕಾರ್ಪಣ್ಯಗಳು, ಸಾಲ ಸೋಲಗಳಿಂದ ಬಾಧಿತರಾದ ಇವರು ೧೯೪೯ರ ವೇಳೆಗೆ ಬಾಗೇಪಲ್ಲಿಗೆ ಬಂದು ತಮ್ಮ ತಮ್ಮ ಕುಲಕಸುಬಾದ ಚಿನ್ನದ ಕೆಲಸವನ್ನು ಮುಂದುವರಿಸಿ ಸ್ಥಿರತೆಯನ್ನು ಹೊಂದುತ್ತಾರೆ. ತಾಲ್ಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ಕೃಷ್ಣಮಾಚಾರಿ ಅವರು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷರೂ ಆಗಿದ್ದು ಇತ್ತೀಚೆಗೆ ಎಂದರೆ ಎರಡು–ಮೂರು ವರ್ಷಗಳ ಕೆಳಗೆ ದಿವಂಗತರಾಗಿರುತ್ತಾರೆ.

## ಗುಡಿಬಂಡೆಯ ರಾಮರಾವ್–ಶಾಮರಾವ್

ಚಿಕ್ಕಬಳ್ಳಾಪುರ ಜಿಲ್ಲೆಗೆ ಸೇರುವ ಗುಡಿಬಂಡೆಯು ಒಂದು ತಾಲ್ಲೂಕಾಗಿ ರೂಪುಗೊಂಡಿದ್ದು, ಇದು ಜಿಲ್ಲೆಯಲ್ಲಿಯೇ ಅತಿ ಚಿಕ್ಕ ತಾಲ್ಲೂಕಾಗಿದೆ. ಆದರೆ ಇದರ ಹಿರಿಮೆಯು ದೊಡ್ಡದೆ ಎನ್ನಬೇಕು. ಅಪೂರ್ವ ಬೆಟ್ಟ, ಕೆರೆಗಳಿಂದ ಕೂಡಿರುವ ಗುಡಿಬಂಡೆಯು ತಾಲ್ಲೂಕಿನ ಕೇಂದ್ರವಾಗಿದ್ದು, ಇಲ್ಲಿನ ಕೋಟೆ ಕೊತ್ತಳಗಳು, ದೇವಾಲಯ, ಬಸದಿಗಳು ಇದರ ಮಹತ್ವಕ್ಕೆ ನಿದರ್ಶನವೆನ್ನಬಹುದು. ಇದೊಂದು ಪುಟ್ಟ ತಾಲ್ಲೂಕಾಗಿದ್ದರೂ ಇಲ್ಲಿನವರು ಹೊಂದಿದ್ದ ಗೌರವ, ಪ್ರಾಶಸ್ತ್ಯಗಳು ಅಪಾರವಾದದ್ದು. ಗುಡಿಬಂಡೆಯಲ್ಲಿದ್ದ ಸ್ವಾತಂತ್ರ್ಯ ಯೋಧರು ನಮ್ಮ ಸ್ಮೃತಿಪಟಲದಲ್ಲಿ ಸೇರಿಹೋಗಿದ್ದಾರೆ.

ಸಹೋದರರಾದ ರಾಮರಾಯರು ಹಾಗೂ ಶಾಮರಾಯರು ಗುಡಿಬಂಡೆ ತಾಲ್ಲೂಕಿನಾದ್ಯಂತ ಸ್ವಾತಂತ್ರ್ಯದ ಕಿಡಿಹಚ್ಚಿ ಅದು ಪ್ರಜ್ವಲಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿರುತ್ತಾರೆ. ತಮ್ಮೊಂದಿಗೆ ಇತರರನ್ನೂ ಸೇರಿಸಿಕೊಂಡು ಹೋರಾಟ ನಡೆಸಿದ ಕಲಿಗಳಾಗಿರುತ್ತಾರೆ. ಅವರೊಂದಿಗೆ ಪ್ರಮುಖವಾಗಿ ಗುರುತಿಕೊಂಡವರೆಂದರೆ ಜೆ.ಪಿ.ಆವಲಕೊಂಡಪ್ಪ, ಸಿ.ಆದಿನಾರಾಯಣಶೆಟ್ಟಿ, ಟೈಲರ್ ಚಲಪತಿ ನಾಯ್ಡು, ಹನುಮಂತರಾವ್, ತಿಮ್ಮಾರೆಡ್ಡಿ, ಕೆ.ವೆಂಕಟಕೃಷ್ಣಯ್ಯ ಮುಂತಾದವರ ಜೊತೆ ತೀರ್ಥಹಳ್ಳಿ ಜೈಲಿಗೆ ಸೇರಿ ೧೧ ತಿಂಗಳು ಸೆರೆವಾಸವನ್ನು ಅನುಭವಿಸುತ್ತಾರೆ. ಅಹೋಬಲಗಟ್ಟಿನ ಬಳಿ ರಾಷ್ಟ್ರಧ್ವಜವನ್ನು ಹಾರಿಸುವ ಪ್ರಯತ್ನದಿಂದಾಗಿ ೧೬ ದಿನಗಳ ಸೆರೆವಾಸವನ್ನು ಅನುಭವಿಸುತ್ತಾರೆ. ಇವರು ಭೂಗತ ಚಳುವಳಿ ಮೂಲಕವಾಗಿ ಸಹ ಚಳುವಳಿಯಲ್ಲಿ ತೊಡಗಿಕೊಂಡವರಾಗಿದ್ದಾರೆ.

## ಶಿಡ್ಲಘಟ್ಟದಲ್ಲಿ ಗಾಂಧೀಜಿ

ಹರಿಜನೋದ್ಧಾರ ನಿಧಿ ಸಂಗ್ರಹಣೆಗಾಗಿ ದಕ್ಷಿಣ ಭಾರತದಲ್ಲಿ ಪ್ರವಾಸ ಕೈಗೊಂಡಿದ್ದ ಗಾಂಧೀಜಿಯವರು ರಕ್ತದೊತ್ತಡದಿಂದ ಬಳಲುತ್ತಿದ್ದು, ವಿಶ್ರಾಂತಿ ಪಡೆಯಲೆಂದು ಪ್ರವಾಸದ ಮಧ್ಯೆ ಬೆಂಗಳೂರು ಮಾರ್ಗವಾಗಿ ನಂದಿಬೆಟ್ಟಕ್ಕೆ ೧೯೩೬ರ ಮೇ ೧೧ರಂದು ಆಗಮಿಸಿ ಕಾಲ್ನಡಿಗೆಯಲ್ಲೇ ಬೆಟ್ಟವನ್ನೇರಿದ್ದರು.

ಈ ಸಂದರ್ಭದಲ್ಲಿ ಗಾಂಧೀಜಿಯವರೊಂದಿಗೆ ಸರ್ದಾರ್ ವಲ್ಲಭಬಾಯಿ ಪಟೇಲ್, ಮಹದೇವ್ ದೇಸಾಯಿ, ಡಾ. ಜೆ.ಸಿ.ಕುಮಾರಪ್ಪ, ಕಾಕಾ ಕಾಲೇಲ್ಕರ್ ಮೊದಲಾದವರ ಜೊತೆಗೆ ಅನೇಕ ಕಾಂಗ್ರೆಸ್ ಸಮಿತಿ ಸದಸ್ಯರೂ ನಂದಿಬೆಟ್ಟದಲ್ಲಿ ಕೆಲದಿನ ತಂಗಿದ್ದರು.

ಕನ್ನಿಂಗ್‌ಹ್ಯಾಂನ ಓಕ್‌ಲ್ಯಾಂಡ್ಸ್‌ನಲ್ಲಿ ಗಾಂಧೀಜಿಯವರು ವಿಶ್ರಾಂತಿ ಪಡೆದುದರ ಸವಿನೆನಪಿಗಾಗಿ ಅದನ್ನೀಗ ಗಾಂಧಿನಿಲಯ ಎಂದು ಮರುನಾಮಕರಣ ಮಾಡಲಾಗಿದೆ. ಗಾಂಧೀಜಿಯವರ ಪ್ರತಿಮೆಯೂ ಅಲ್ಲಿದೆ.

೧೯೩೬ರ ಮೇ ೩೧ರಂದು ನಂದಿಬೆಟ್ಟದ ಮೇಲಿದ್ದ ಜನರಿಂದ ಬೀಳ್ಕೊಟ್ಟು ಸಂಗಡಿಗರೊಂದಿಗೆ ಬೆಟ್ಟದಿಂದ ಕಾಲ್ನಡಿಗೆಯಲ್ಲೇ ಗಾಂಧೀಜಿ

ಕೆಳಗಿಳಿದರು. ಸುಲ್ತಾನ್‌ಪೇಟೆಯಲ್ಲಿ ಕಾರನ್ನು ಏರಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರಪೇಟೆ ಹಾಗೂ ಕೆಜಿಎಫ್ ಗಳಲ್ಲಿ ಹರಿಜನ ನಿಧಿ ಸಂಗ್ರಹಿಸಿ ಮಾಲೂರು ಮಾರ್ಗವಾಗಿ ಬೆಂಗಳೂರು ತಲುಪಿದರು. ಚಿಕ್ಕಬಳ್ಳಾಪುರದ ಸರ್ಕಾರಿ ಪ್ರೌಢಶಾಲೆಯ ಬಳಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಪುರಸಭೆಯವರು ೧೦೦ ರೂ.ಗಳ ದೇಣಿಗೆ ನೀಡಿದರು.

ಶಿಡ್ಲಘಟ್ಟದಲ್ಲಿ ಪುರಸಭೆ ಉಪಾಧ್ಯಕ್ಷರಾಗಿದ್ದ ವಿರೂಪಾಕ್ಷಪ್ಪ ಗಾಂಧೀಜಿಗೆ ಮಾನಪತ್ರ ಅರ್ಪಿಸಿ ೧೦೦ ರೂ.ಗಳ ದೇಣಿಗೆ ನೀಡಿದರು. ಚಿಂತಾಮಣಿಯಲ್ಲಿ ಪುರಸಭೆಯವರು ೨೦೦ ರೂ.ಗಳ ದೇಣಿಗೆ ಅರ್ಪಿಸಿದರು. ಹಾದಿಯುದ್ದಕ್ಕೂ ಗ್ರಾಮಗಳ ಬಳಿ ತೋರಣ ಕಟ್ಟಿ ಅಲಂಕರಿಸಿದ್ದ ಗ್ರಾಮಸ್ಥರು ಗಾಂಧೀಜಿಗೆ ಹೂಮಾಲೆ ಹಾಕಿ, ಶಕ್ತ್ಯಾನುಸಾರ ದೇಣಿಗೆ ಅರ್ಪಿಸಿದರು. ಗಾಂಧೀಜಿಯವರ ಇಂಗ್ಲಿಷ್ ಭಾಷಣವನ್ನು ಕೋಲಾರ ಜಿಲ್ಲಾ ಬೋರ್ಡ್ ಹಾಗೂ ಜಿಲ್ಲಾ ಹರಿಜನ ಸೇವಾ ಸಂಘದ ಅಧ್ಯಕ್ಷರೂ ಆಗಿದ್ದ, ಮುಂದೆ ಸ್ವಾತಂತ್ರ್ಯಾನಂತರದ ಕರ್ನಾಟಕದ ಮೊದಲ ಮುಖ್ಯಮಂತ್ರಿಯಾದ ಕೆ.ಸಿ.ರೆಡ್ಡಿ ಅನುವಾದಿಸುತ್ತಿದ್ದರು.

❑

## ಶಿಡ್ಲಘಟ್ಟ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರು

### ಎಂ.ಬಿ.ನಾರಾಯಣಗೌಡ

ಶಿಡ್ಲಘಟ್ಟ ತಾಲ್ಲೂಕಿನ ಕೆ.ಮುತ್ತಕದಹಳ್ಳಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕಾಂಗ್ರೆಸ್ ಧುರೀಣ ಎಂ.ಬಿ.ನಾರಾಯಣಗೌಡ ಸ್ವಾತಂತ್ರ್ಯ ಹೋರಾಟದಲ್ಲಿ ಜೈಲ್ ಭರೋ ಚಳುವಳಿಯಲ್ಲಿ ಪಾಲ್ಗೊಂಡು ಮೂರು ತಿಂಗಳ ಕಾಲ ಜೈಲು ಸೇರಿ ದೇಶಕ್ಕಾಗಿ ಹೋರಾಡಿದ್ದರು. ಅವರು ಕರ್ನಾಟಕದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಹಾಗೂ ಮಾಜಿ ಶಾಸಕ ಆವಲರೆಡ್ಡಿ ಅವರ ಒಡನಾಡಿಯಾಗಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಜಿಲ್ಲಾ ಬೋರ್ಡ್ ಚುನಾವಣಾ ಸದಸ್ಯರಾಗಿದ್ದರು. ಸ್ವಾತಂತ್ರ್ಯಾನಂತರ ಸುಮಾರು ಐವತ್ತು ವರ್ಷಗಳ ಕಾಲ ಸತತವಾಗಿ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಟಿ.ಎ.ಪಿ.ಸಿ.ಎಂ.ಎಸ್.ನ ಸಂಸ್ಥಾಪಕ ಅಧ್ಯಕ್ಷರೂ ಕೂಡ ಆಗಿದ್ದರು.

ಸ್ವಾತಂತ್ರ್ಯ ಹೋರಾಟಗಾರರಾಗಿದ್ದರೂ ಸರ್ಕಾರದಿಂದ ಯಾವುದೇ ರೀತಿಯ ಸವಲತ್ತು ಅಥವಾ ಮಾಶಾಸನ ಪಡೆದಿರಲಿಲ್ಲ. ಬೆಂಗಳೂರಿನಲ್ಲಿ ನಿವೇಶನ ನೀಡುವ ಪ್ರಸ್ತಾಪ ಮಾಡಿದಾಗ, ಅದನ್ನು ಅಗತ್ಯವಿರುವವರಿಗೆ ನೀಡಿ ಎಂದು ತಿರಸ್ಕರಿಸಿದ್ದವರು. ಶಿಡ್ಲಘಟ್ಟ ಕಾಂಗ್ರೆಸ್ ಭವನದ ಜಾಗ ಮತ್ತು ಟಿ.ಎ.ಪಿ.ಸಿ.ಎಂ.ಎಸ್. ನಿವೇಶನ ಅವರ ಅಧ್ಯಕ್ಷತೆ ಅವಧಿಯಲ್ಲಿ ೧೯೬೨ರಲ್ಲಿ ಮಂಜೂರಾಗಿದ್ದು, ೨೦೦೨ರಲ್ಲಿ ಅವರು ಕಾಂಗ್ರೆಸ್ ಭವನದ ಶಿಲಾನ್ಯಾಸ ಮಾಡಿದ್ದರು.

### ಚೌಡಸಂದ್ರದ ನಾರಾಯಣಪ್ಪ

ಕಂಬದಹಳ್ಳಿಯ ಮುನಿಶಾಮಪ್ಪ ಅವರು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹ್ಯಾಟ್ ತೆಗೆದು ಗಾಂಧಿ ಟೋಪಿಯನ್ನು ಇಟ್ಟುಬಿಟ್ಟರು. ತಕ್ಷಣವೇ ಲಾಠಿಚಾರ್ಜ್

ಅಂದರು. ಸತ್ಯಾಗ್ರಹ ಮಾಡುತ್ತಿದ್ದವರನ್ನು ಚೆನ್ನಾಗಿ ಬಡಿದರು ಎಂದು ತಮ್ಮ ಸ್ವಾತಂತ್ರ್ಯದ ಹೋರಾಟದ ನೆನಪುಗಳನ್ನು ತೆರೆದಿಟ್ಟಿದ್ದರು ಚೌಡಸಂದ್ರದ ನಾರಾಯಣಪ್ಪ.

"ರೈಲ್ವೆ ಹಳಿಗಳ ಬಳಿ ಇದ್ದ ಕಲ್ಲುಗಳನ್ನು ಕೆಲವರು ಪೊಲೀಸರೆಡೆಗೆ ತೂರತೊಡಗಿದರು. ಫೈರ್ ಅಂದರು ಪೊಲೀಸರು. ಒಮ್ಮೆಗೇ ಢಮಾರ್ ಢಮಾರ್ ಎಂಬ ದೊಡ್ಡದಾದ ಸದ್ದು. ಸಬ್‌ಇನ್ಸ್‌ಪೆಕ್ಟರ್ ಸಿಡಿಸಿದ ಗುಂಡಿಗೆ ಇಬ್ಬರು ಸತ್ತರು. ನಮ್ಮನ್ನೆಲ್ಲಾ ಹಿಡಿದು ಜೈಲಿಗೆ ಹಾಕಿದರು. ಅನಂತರ ತಿಳಿಯಿತು ಪೊಲೀಸ್ ಪೇದೆಗಳು ಆಕಾಶಕ್ಕೆ ಗುಂಡು ಹಾರಿಸಿದ್ದರಂತೆ. ಅವರಿಗೂ ಸ್ವಾತಂತ್ರ್ಯದ ಹಂಬಲವಂತೆ. ಇಲ್ಲದಿದ್ದರೆ ಈ ಕಥೆ ಹೇಳಲು ನಾನೂ ಇರುತ್ತಿರಲಿಲ್ಲ ಮತ್ತು ಆ ದಿನ ನೂರಾರು ಹೆಣಗಳು ಉರುಳುತ್ತಿದ್ದವು ಆ ಸಮಯದಲ್ಲಿ ನಾನಾಗ ಎರಡು ಮಕ್ಕಳ ತಂದೆ. ಅಷ್ಟಾಗಿ ವಿದ್ಯೆಯೂ ಇರಲಿಲ್ಲ. ಮಳ್ಳೂರಿನ ಪಾಪಣ್ಣ ನಮಗೆಲ್ಲಾ ಸತ್ಯಾಗ್ರಹ ಮಾಡಲು ಪ್ರೇರೇಪಿಸಿದರು.

ಆಗ ಶಿಡ್ಲಘಟ್ಟ ತಾಲ್ಲೂಕು ಕಛೇರಿಯ ಮುಂದೆ ನಾವೆಲ್ಲಾ ಮುಷ್ಕರ ಪ್ರಾರಂಭಿಸಿದೆವು. ಸಂಜೆ ವೇಳೆಗೆ ಸೂರೇಗೌಡರು, ಕಂಪನಿ ಮುನಿವೆಂಕಟಪ್ಪ ಅವರ ಮನೆಗಳ ಬಳಿ ಸೇರುತ್ತಿದ್ದೆವು. ರಾತ್ರಿ ಹೊತ್ತಿಗೆ ನಮಗೆಲ್ಲಾ ಊಟ ಹಾಕುತ್ತಿದ್ದರು. ಸುಮಾರು ನೂರು ಜನ ಸೇರುತ್ತಿದ್ದೆವು. ಬಚ್ಚಹಳ್ಳಿಯ ಚಂಗಲರಾವ್ ಮುಂತಾದವರು ಭಾಷಣ ಮಾಡುತ್ತಿದ್ದರು. ೧೫ ದಿನಗಳಾದ ಮೇಲೆ ತುಮ್ಮನಹಳ್ಳಿಯಿಂದ ಅಲಂಕರಿಸಿದ ಎತ್ತುಗಳನ್ನು ಕಟ್ಟಿಕೊಂಡು ಅನ್ನದ ಗಾಡಿಗಳು ಬಂದವು. ಆಸ್ಪತ್ರೆ ಮೈದಾನದಲ್ಲಿ ನಮಗೆಲ್ಲಾ ಅನ್ನಸಂತರ್ಪಣೆ. ನಮ್ಮ ಹೋರಾಟ ತೀವ್ರಗೊಂಡಾಗ ರಿಸರ್ವ್ ವ್ಯಾನ್ ಬಂತು. ಆಗ ನಡೆದದ್ದು ಗೋಲಿಬಾರ್.

೧೫ ದಿನಗಳ ಕಾಲ ಶಿಡ್ಲಘಟ್ಟ ಜೈಲಿನಲ್ಲಿ ಮತ್ತು ಒಂದು ತಿಂಗಳು ಮೂರು ದಿನ ಚಿಕ್ಕಬಳ್ಳಾಪುರದ ಜೈಲಿನಲ್ಲಿ ನಮ್ಮನ್ನು ಇಟ್ಟಿದ್ದರು. ಆಗ ಬಂತು ಸ್ವಾತಂತ್ರ್ಯ, ಮಧ್ಯರಾತ್ರಿಯ ಸ್ವಾತಂತ್ರ್ಯ. ೨೮೦ ಜನ ಇದ್ದೆವು. ನಮ್ಮ ಊರುಗಳಿಗೆ ವಾಪಸ್ ಕಳುಹಿಸಿದರು. ನಮ್ಮ ಹೋರಾಟ ಸಾರ್ಥಕವಾದ ಭಾವದಿಂದ ಊರಿಗೆ ಮರಳಿದೆವು. ಹೋರಾಟ ಪ್ರಾರಂಭಿಸಿದಾಗ ನಮಗೆ ಇಷ್ಟು ಬೇಗ ಸ್ವಾತಂತ್ರ್ಯ ಸಿಗುವುದೆಂಬ ಕಲ್ಪನೆಯಿರಲಿಲ್ಲ. ಆದರೆ ನಮ್ಮ ಹೋರಾಟಕ್ಕೆ ಸಿಕ್ಕ ಫಲ ತೃಪ್ತಿ ತಂದಿತು.

ರಾಜೀವ್ ಗಾಂಧಿಯವರು ಪ್ರಧಾನಿಯಾದಾಗ ನಮ್ಮ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರನ್ನು ದೆಹಲಿಗೆ ಕರೆಸಿ ಗೌರವಿಸಿದರು. ಮೇಲೂರು ಸುಬ್ಬಣ್ಣ, ಮಳ್ಳೂರು ಮುನಿನಾಗಪ್ಪ, ಭಕ್ತರಹಳ್ಳಿ ಬಚ್ಚೇಗೌಡ, ಬಚ್ಚಹಳ್ಳಿ ಚಂಗಲರಾವ್, ಚೌಡಸಂದ್ರ ರಾಮಪ್ಪ, ಮೇಲೂರು ಸಂಜೀವಪ್ಪ, ಹುಜಗೂರು ಹನುಮಂತರಾಯಪ್ಪ, ಮಳ್ಳೂರು ಮುನಿಯಪ್ಪ, ಅಪ್ಪೇಗೌಡನಹಳ್ಳಿ ಪಿಳ್ಳಪ್ಪ ಮುಂತಾದವರು ದೆಹಲಿಗೆ ಹೋಗಿದ್ದೆವು. ಇವರಲ್ಲಿ ಬಹುತೇಕ ಮಂದಿ ಈಗಿಲ್ಲ ಎನ್ನುತ್ತಾ ತಮ್ಮ ಗತಕಾಲದ ನೆನಪುಗಳನ್ನು ಹಂಚಿಕೊಂಡಿದ್ದರು.



**ಬಚ್ಚಹಳ್ಳಿಯ ಚಂಗಲರಾವ್**

"ಶಿಡ್ಲಘಟ್ಟ ತಾಲ್ಲೂಕು ಕಛೇರಿ ಮುಂದೆ ಸತ್ಯಾಗ್ರಹ ಕುಳಿತಿದ್ದೆವು. ನಾನು ಇನ್ನಿತರೆ ನೂರಕ್ಕೂ ಹೆಚ್ಚುಮಂದಿ ಪಾಲ್ಗೊಂಡು ಹರತಾಳ ಮಾಡುತ್ತಿದ್ದಾಗ ಅಲ್ಲಿಗೆ ಡಿಸಿ ಜಾರ್ಜ್ ಮ್ಯಾಥ್ಯೂಸ್ ಹಾಗೂ ಎಸ್ಪಿ ಜೈಸಿಂಗ್ ಬಂದು ನಮ್ಮನ್ನು ಸತ್ಯಾಗ್ರಹ ಬಿಡುವಂತೆ ಹೇಳಿದರು. ನಾವು ಒಪ್ಪದೆ ಸತ್ಯಾಗ್ರಹ ಮುಂದುವರಿಸಿದಾಗ ಬ್ರಿಟಿಷ್ ಪೊಲೀಸರ ಬಂದೂಕಿನಿಂದ ಹಾರಿದ ಗುಂಡಿಗೆ ಭಕ್ತರಹಳ್ಳಿಯ ಕುಂಬಾರದೊಡ್ಡಿ ನಾರಾಯಣಪ್ಪ ಬಲಿಯಾಗಿದ್ದು ಇನ್ನೂ ನನ್ನ ಕಣ್ಣೆದುರಿಗೆ ಕಟ್ಟಿದಂತಿದೆ" ಎಂದು ಸ್ವಾತಂತ್ರ್ಯ ಹೋರಾಟದ ದಿನಗಳನ್ನು ನೆನೆಸಿಕೊಂಡು ಕಣ್ಣಂಚಿನಲ್ಲಿ ಜಿನುಗಿದ ಕಣ್ಣೀರನ್ನು ಒರೆಸಿಕೊಳ್ಳುತ್ತಾ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಜೈಲುವಾಸವನ್ನೂ ಕಂಡ ಬಚ್ಚಹಳ್ಳಿಯ ಚಂಗಲರಾವ್ ತನ್ನ ಕಳೆದ ಹೋರಾಟದ ದಿನಗಳ ಬಗ್ಗೆ ವಿವರಿಸಿದ್ದರು.

"ನನಗೆ ಜನವಾಣಿ ಪತ್ರಿಕೆಯು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಪ್ರೇರೇಪಣೆ ನೀಡಿತಲ್ಲದೆ ಆಗಿನ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸಪುರದ ಜಿ.ನಾರಾಯಣಗೌಡರ ಸಂಪರ್ಕ ಕೂಡ ನೇರವಾಗಿ ಹೋರಾಟಕ್ಕೆ ಧುಮುಕಲು ಕಾರಣವಾಯಿತು. ೧೯೪೭ನೇ ವರ್ಷ ಇರಬೇಕು. ನಗರದ ತಾಲ್ಲೂಕು ಕಛೇರಿ ಮುಂದೆ ನಾನು ಸೇರಿದಂತೆ ಮಳ್ಳೂರು ಪಾಪಣ್ಣ, ಭಕ್ತರಹಳ್ಳಿಯ ಬಿ.ವೆಂಕಟರಾಯಪ್ಪ, ಕುಂಬಾರದೊಡ್ಡಿ ನಾರಾಯಣಪ್ಪ, ಜಿ.ನಾರಾಯಣಗೌಡರು, ವೀರಪ್ಪ, ಕೆ.ಎಂ.ನಂಜುಂಡಪ್ಪ, ಕಂಬದಹಳ್ಳಿಯ ಮುನಿಸ್ವಾಮಪ್ಪ, ಮಳಮಾಚನಹಳ್ಳಿಯ ದ್ಯಾವಪ್ಪ ಇನ್ನಿತರರ ನೇತೃತ್ವದಲ್ಲಿ ಕೊತ್ತನೂರು, ತಿಪ್ಪೇನಹಳ್ಳಿ, ಮೇಲೂರು, ಮಳ್ಳೂರು, ಭಕ್ತರಹಳ್ಳಿ, ಮಳಮಾಚನಹಳ್ಳಿ, ಬೋದಗೂರು ಹಾಗೂ ನಗರದ ನೂರಾರು ನಾಗರಿಕರು ಸೇರಿದ್ದೆವು. ಒಂದು ದಿನ ಕಂಬದಹಳ್ಳಿಯ ಮುನಿಸ್ವಾಮಿ ತನ್ನ ಸೈಕಲ್ ಮಾರಿ ಬುರುಗು ಖರೀದಿಸಿ ಅದನ್ನು ನಗರದ ಎಲ್ಲಾ ಶಾಲೆಗಳ ಮಕ್ಕಳಿಗೂ ಹಂಚಿ ನೂರಾರು ಮಂದಿ ವಿದ್ಯಾರ್ಥಿಗಳನ್ನು ಆ ಸತ್ಯಾಗ್ರಹಕ್ಕೆ ಕರೆದುಕೊಂಡು ಬಂದಿದ್ದ, ಸತ್ಯಾಗ್ರಹ ಜೋರಾಗಿತ್ತು.

ಅಲ್ಲಿಗೆ ಬಂದ ಎಸ್ಪಿ ಹಾಗೂ ಡಿಸಿ ಸತ್ಯಾಗ್ರಹವನ್ನು ಕೈಬಿಡುವಂತೆ

ಹೇಳಿದರು. ನಾವು ಜಗ್ಗಲಿಲ್ಲ. ಆಗ ಎಸ್ಪಿ ಬಂದೂಕು ತೆಗೆದು ಗುಂಡು ಹಾರಿಸ್ತೇನೆ ಅಂತ ಬೆದರಿಸಿದರು. ಆಗ ಕಂಬದಹಳ್ಳಿಯ ಮುನಿಸ್ವಾಮಪ್ಪ ತನ್ನ ಅಂಗಿಯನ್ನು ಹರಿದುಹಾಕಿ ನಿನ್ನ ಬಂದೂಕಿನಲ್ಲಿ ಗುಂಡು ಇದ್ದರೆ, ನಿನಗೆ ಧೈರ್ಯ ಇದ್ದರೆ ನನಗೆ ಗುಂಡು ಹಾರಿಸು ಎಂದು ಎಸ್ಪಿಯವರಿಗೆ ಸವಾಲು ಹಾಕಿದರು. ಆಗ ಜೊತೆಯಲ್ಲಿದ್ದ ಎಸ್.ಐ ನಾರಾಯಣ್, 'ಏಯ್ ಎಸ್ಪಿ ಸಾಹೇಬರಿಗೆ ನೀನು ರೋಫ್ ಹಾಕ್ತೀಯಾ ಅಂತ ಮುನಿಸ್ವಾಮಿಗೆ ಒಂದು ಬಾರಿಸಿದರು. ಆಗ ಮುನಿಸ್ವಾಮಿಯೂ ಎಸ್.ಐ.ನಾರಾಯಣ್‌ಗೆ ಬಲವಾಗಿ ಗುದ್ದಿದರು. ಆಗ ನಾರಾಯಣ್‌ರ ಪೊಲೀಸ್ ಟೋಪಿ ಕೆಳಗೆ ಬೀಳುತ್ತಿದ್ದಂತೆ ಲಾಠಿ ಚಾರ್ಜ್ ಮಾಡಲಾಯಿತು. ಲಾಠಿ ಏಟಿನಿಂದ ಕಂಬದಹಳ್ಳಿಯ ಮುನಿಸ್ವಾಮಿಯ ತಲೆಗೆ ಬಲವಾದ ಏಟು ಬಿದ್ದರೂ ಬದುಕುಳಿದ. ಆದರೆ ಬಂದೂಕಿನ ಗುಂಡಿಗೆ ಕುಂಬಾರದೊಡ್ಡಿ ನಾರಾಯಣಪ್ಪ ತೀವ್ರವಾಗಿ ಗಾಯಗೊಂಡರು. ಚಿಕ್ಕಬಳ್ಳಾಪುರದ ಸಿಎಸ್ಐ ಆಸ್ಪತ್ರೆಗೆ ಕರೆದೊಯ್ದರೂ ಕೂಡ ಬದುಕುಳಿಯಲಿಲ್ಲ.

ಇದರಿಂದ ರೊಚ್ಚಿಗೆದ್ದ ಜನ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾದ ಎಸ್.ಐ.ನಾರಾಯಣ್‌ರ ಮನೆಯ ಮೇಲೆ (ನಗರದ ಅಶೋಕ ರಸ್ತೆಯ ಕೊಂಡಪ್ಪನವರ ಮನೆ ಸಮೀಪದಲ್ಲಿತ್ತು) ದಾಳಿ ನಡೆಸಿ ಲೂಟಿ ಮಾಡಿದರು. ಮೊದಲೇ ದಾಳಿಯ ಸುಳಿವು ಅರಿತಿದ್ದ ಎಸ್.ಐ.ನಾರಾಯಣ್‌ರ ಮನೆಯವರು ಮನೆಯಲ್ಲಿ ಎಲ್ಲವನ್ನೂ ಇದ್ದಹಾಗೆ ಬಿಟ್ಟು ಮನೆಬಿಟ್ಟು ಬಚ್ಚಿಟ್ಟುಕೊಂಡಿದ್ದರು. ಮನೆ ದರೋಡೆ ಹಾಗೂ ಕೊಲೆ ಯತ್ನದ ಮೇಲೆ ನನ್ನನ್ನು ಸೇರಿ ೩೦ಕ್ಕೂ ಹೆಚ್ಚು ಮಂದಿಯನ್ನು ಚಿಕ್ಕಬಳ್ಳಾಪುರದ ಜೈಲಿಗೆ ಅಟ್ಟಲಾಯಿತು. ೫೨ ದಿನ ಜೈಲುವಾಸ ಕಂಡು ಬೇಷರತ್ ಮೇಲೆ ಬಿಡುಗಡೆಯಾಗಿ ಬಂದ" ಎಂದು ತಮ್ಮ ಹೋರಾಟದ ದಿನಗಳನ್ನು ನೆನೆಸಿಕೊಳ್ಳುತ್ತಿದ್ದ ಚಂಗಲರಾವ್ ಅವರು ಸ್ವಾತಂತ್ರ್ಯಾನಂತರ ಗಾಂಧೀಜಿಯ ಸ್ವಾವಲಂಬನೆಯ ಕರೆಗೆ ಓಗೊಟ್ಟು ನಗರದಲ್ಲಿನ ಮನೆಯನ್ನು ತೊರೆದು ತಮಗೆ ವಂಶಪಾರಂಪರ್ಯವಾಗಿ ಬಂದಿದ್ದ ಜೋಡಿ ಗ್ರಾಮ ಬಚ್ಚಹಳ್ಳಿಗೆ ಬಂದು ನೆಲಸಿ ವ್ಯವಸಾಯ ಮಾಡಿಕೊಂಡು ಮಾದರಿಯಾಗಿ ಬದುಕುತ್ತಿದ್ದರು.

❑

# ಉಪಸಂಹಾರ

ಭಾರತ ಸ್ವಾತಂತ್ರ್ಯದ ಕನಸನ್ನು ಹತ್ತೊಂಬತ್ತನೇ ಶತಮಾನದಲ್ಲೇ ಕಾಣಲಾಗಿತ್ತಾದರೂ, ಅದರ ಸಾಕಾರಕ್ಕೆ ಸುಮಾರು ತೊಂಬತ್ತು ವರ್ಷಗಳೇ ಬೇಕಾಯಿತು. ದಕ್ಷಿಣ ಆಫ್ರಿಕಾದಿಂದ ಮಹಾತ್ಮ ಗಾಂಧೀಜಿ ಅವರ ಆಗಮನವು ದೇಶದ ಜನರಲ್ಲಿ ಹುರುಪು–ಚೈತನ್ಯಗಳನ್ನು ತಂದುಕೊಟ್ಟಿತು. ದೇಶಪ್ರೇಮಿಗಳಾಗಿ, ದೇಶಭಕ್ತರಾಗಿ ತಾವು ಮಾಡಬೇಕಾದ ಕಾರ್ಯಕ್ಕೆ ದಾರಿ ಕಂಡಿತು. ಇಂತಹದೊಂದು ಸ್ವಾತಂತ್ರ್ಯದ ಹೆದ್ದಾರಿಯಲ್ಲಿ ಧೀರರಾಗಿ ನಡೆದು ಚಳುವಳಿ, ಸತ್ಯಾಗ್ರಹಗಳ ಮೂಲಕ ಮಾತ್ರವಲ್ಲದೆ ಬಲಿದಾನದ ಮೂಲಕ ಭಾರತಾಂಬೆಯ ಪವಿತ್ರ ದೇಹದ ಮೇಲೆ ರಕ್ತದ ಕೋಡಿಯನ್ನೇ ಹರಿಸಿ ಹುತಾತ್ಮರಾದರು. ಇದಲ್ಲದೆ ಲೆಕ್ಕವಿಲ್ಲದಷ್ಟು ಜನ ತಮ್ಮ ಮನೆ–ಸಂಸಾರಗಳನ್ನು ತೊರೆದು ದೇಶಸೇವೆಗಾಗಿ ಟೊಂಕಕಟ್ಟಿ ನಿಂತು ಇಂದು ನಾವು ಆಚರಿಸುತ್ತಿರುವ ಸ್ವಾತಂತ್ರ್ಯ ಅಮೃತ ಮಹೋತ್ಸವಕ್ಕೆ ಕಾರಣಕರ್ತರಾಗಿದ್ದಾರೆ. ಅವರೆಲ್ಲರ ಆಶಯ–ಅಭೀಪ್ಸೆಗಳು ಸದಾಕಾಲ ಚಿರಂತನವಾಗಿ ಉಳಿದು ದೇಶದ ಮಹಾನ್ ಅಭಿವೃದ್ಧಿ ಆಗಬೇಕಾಗಿದೆ. ಇದು ನಮ್ಮೆಲ್ಲರ ಸಂಕಲ್ಪವೂ ಆದಾಗ ಭಾರತ ದೇಶವು ಇಡೀ ವಿಶ್ವದಲ್ಲಿಯೇ ಬಲಿಷ್ಠವಾದ, ಸಂಪದ್ಭರಿತವಾದ ದೇಶವಾಗಿ ಉಳಿಯಬಲ್ಲದು.

❑

## ಗ್ರಂಥ ನೆರವು


೧. ಸ್ವಾತಂತ್ರ್ಯ ಸಂಗ್ರಾಮ ಸ್ಮೃತಿಗಳು: ತೃತೀಯ ಸಂಪುಟ, ದ್ವಿತೀಯ ಮುದ್ರಣ ೧೯೯೮. ಸಂಪಾದಕರು: ಸೂರ್ಯನಾಥ್ ಕಾಮತ್, ಪ್ರಕಟಣೆ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨. ಕೋಲಾರ ಜಿಲ್ಲಾ ಗೆಜೆಟಿಯರ್ (ಪರಿಷ್ಕೃತ ಆವೃತ್ತಿ–೨೦೦೫) ಮುಖ್ಯ ಸಂಪಾದಕರು: ಹೆಚ್.ಚಿತ್ತರಂಜನ್, ಕಾಅಸೇ, ಪ್ರಕಟಣೆ: ಕರ್ನಾಟಕ ರಾಜ್ಯ ಗೆಜೆಟಿಯರ್ ಇಲಾಖೆ, ಬೆಂಗಳೂರು.

೩. ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ: ವೇಮಗಲ್ ಸೋಮಶೇಖರ್

೪. ನಮ್ಮ ಶಿಡ್ಲಘಟ್ಟ: ಡಿ.ಜೆ.ಮಲ್ಲಿಕಾರ್ಜುನ

೫. ರತ್ನಗರ್ಭ ವಸುಂಧರಾ: ಬಿಟ್ಟಸಂದ್ರ ಗುರುಸಿದ್ದಯ್ಯ, ಸ್ವಾತಿ ಪ್ರಕಾಶನ ಕೋಡಿಮಂಜೇನಹಳ್ಳಿ, ದೇವನಹಳ್ಳಿ ತಾಲ್ಲೂಕು.

೬. ಸ್ವಾತಂತ್ರ್ಯ ಯೋಧ ಕಳವಾರದ ವೆಂಕಟಕೃಷ್ಣಪ್ಪ (ಅಪ್ರಕಟಿತ): ಗೋಪಾಲಗೌಡ ಕಲ್ವಮಂಜಲಿ, ಚಿಕ್ಕಬಳ್ಳಾಪುರ.


❑

### ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
### ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ<br>ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |